ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

## Monthly Magazine

ಸಂಪುಟ 9 ಸಂಚಿಕೆ 5 ಮೇ 2024



ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ಕಲ್ಯಾಣಿ ಗ್ರೂಪ್‌ನ ಮುಖ್ಯಸ್ಥರು ಹಾಗೂ ಖ್ಯಾತ ಉದ್ಯಮಿಗಳಾದ ಶ್ರೀ ಬಾಬಾ ಕಲ್ಯಾಣಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪೂಜ್ಯರು ಸನ್ಮಾನಿಸಿ ಆಶೀರ್ವದಿಸಿದರು. ಮೆರಿಟರ್ ಹೆಚ್‌ವಿಎಸ್ ಇಂಡಿಯಾ ಸಂಸ್ಥೆಯ ಅಧ್ಯಕ್ಷರಾದ ಡಾ. ಎನ್. ಮುತ್ತುಕುಮಾರ್‌ರವರು ಚಿತ್ರದಲ್ಲಿದ್ದಾರೆ (4 ಏಪ್ರಿಲ್ 2024)




ಊಟಿಯ ಜೆಎಸ್‌ಎಸ್ ಔಷಧವಿಜ್ಞಾನ ಕಾಲೇಜಿನಲ್ಲಿ ನಡೆದ ವಾರ್ಷಿಕ ದಿನಾಚರಣೆ ಮತ್ತು ಹಿರಿಯ ವಿದ್ಯಾರ್ಥಿಗಳ ಸಭೆಯಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು (30 ಏಪ್ರಿಲ್ 2024)



ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ 16ನೇ ಪದವೀಧರರ ದಿನಾಚರಣೆಯಲ್ಲಿ ಡಾ. ಎಂ. ಪೂರ್ಣಿಮ, ಡಾ. ಸಿ.ಜಿ. ಬೆಟಸೂರಮಠ, ಶ್ರೀಮತಿ ಸಿ. ಶಿಖಾ, ಶ್ರೀಮತಿ ಶಾಲಿನಿ ಗುಪ್ತ, ಶ್ರೀಮತಿ ಅನುಪಮ ವಸಿಷ್ಠರವರುಗಳೊಂದಿಗೆ ಪದಕ ಮತ್ತು ಪ್ರಶಸ್ತಿ ಪುರಸ್ಕೃತ ಪದವೀಧರರುಗಳಿದ್ದಾರೆ (29 ಏಪ್ರಿಲ್ 2024)

## ಶ್ರೀ ಸುತ್ತೂರು ಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ

**ಶ್ರೀ ಸುತ್ತೂರು ಕ್ಷೇತ್ರದಲ್ಲಿ** ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏಪ್ರಿಲ್ 9ರಂದು ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ ಕಾರ್ಯಕ್ರಮಗಳು ಜರುಗಿದವು

ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ವಿನೋದಮ್ಮನವರು 'ಅಲ್ಲಮಪ್ರಭುದೇವರ ವಚನಗಳಲ್ಲಿ ದಾರ್ಶನಿಕತೆ' ವಿಷಯ ಕುರಿತು ಉಪನ್ಯಾಸ ನೀಡಿ, ಅಲ್ಲಮಪ್ರಭುಗಳು ಆಧ್ಯಾತ್ಮಿಕ ಮಹೋನ್ನತದ ಶಿಖರ. ವಿಜ್ಞಾನಿಗಳು ಭೂಮಿಯ ವಸ್ತುನಿಷ್ಠತೆಯನ್ನು ಅನ್ವೇಷಿಸಿದರೆ, ಕವಿಗಳು ಭಾವನಾತ್ಮಕ ಗುಣವನ್ನು ಶೋಧಿಸುತ್ತಾರೆ. ಅಲ್ಲಮಪ್ರಭುಗಳ ವಚನಗಳು ಇವೆರಡರ ಸಮ್ಮಿಶ್ರಣವನ್ನು ಅರ್ಥೈಸುತ್ತವೆ. ಇವರ ವಚನಗಳನ್ನು ಆಳವಾಗಿ ಅಧ್ಯಯನ ಮಾಡಿದರೆ ಮಾತ್ರ ಅದರ ತಿರುಳು ನಮಗೆ ಅರ್ಥವಾಗುತ್ತದೆ. ಮನುಷ್ಯ ಆಂತರಿಕ ಸಾಧನೆಗೆ ಹೆಚ್ಚು ಮಹತ್ವವನ್ನು ನೀಡಿ, ಆಂತರಿಕ ಕೃಷಿಯನ್ನು ಮಾಡಬೇಕು. ದೇಹವನ್ನೆ ತೋಟವನ್ನಾಗಿ ಮಾಡಿ, ಮನಸ್ಸನ್ನು ಗುದ್ದಲಿಯನ್ನಾಗಿ ಮಾಡಿ, ಮನುಷ್ಯನಲ್ಲಿರುವ ಕೆಟ್ಟ ಗುಣಗಳನ್ನು ಬೇರು ಸಮೇತ ಕಿತ್ತು ಹಾಕಬೇಕು. ದಯವೇ ಧರ್ಮದ ಮೂಲವೆಂಬ ಶರಣರ ಮಾತನ್ನು ಮನನ ಮಾಡುತ್ತಿರಬೇಕು. ಧರ್ಮವಿಲ್ಲದ ವಿಜ್ಞಾನ ಬರಡು ಭೂಮಿಯಂತೆ ಎಂದರು.

ಮೈಸೂರಿನ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದ ಅಧ್ಯಕ್ಷರು ಹಾಗೂ ಪಂಚಾಂಗಕರ್ತರಾದ ಸಿದ್ಧಾಂತಿ ಡಾ. ಕೆ. ಜಿ. ಪುಟ್ಟಹೊನ್ನಯ್ಯನವರು ಪಂಚಾಗ ಪಠಣ ಮಾಡಿ, ಮುಂಗಾರು ಮಳೆಯ ಸಮೃದ್ಧಿಯಿಂದ ಕೃಷಿ ಚಟುವಟಿಕೆಗಳಿಗೆ ಸಹಾಯಕವಾಗುತ್ತದೆ. ಹಿಂಗಾರು ಮಳೆ ಮಾತ್ರ ಸಾಧಾರಣವಾಗಿ ಆಗುತ್ತದೆ ಎಂದು ತಿಳಿಸಿದರು. ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗವು ರಾಷ್ಟ್ರೀಯ ಪಂಚಾಂಗದ ವಿವರಗಳನ್ನು ಒಳಗೊಂಡಿದೆ ಎಂದು ತಿಳಿಸಿದರು. ವಿದ್ವಾನ್ ಮಲ್ಲಣ್ಣನವರು ಪಂಚಾಂಗದ ಮಹತ್ವ ಕುರಿತು ಮಾತನಾಡಿದರು.

ಪ್ರಾತಃಕಾಲ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ ನೆರವೇರಿದವು. ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ ನಡೆದವು.

ಶ್ರೀಮಠ ಹಾಗೂ ಗ್ರಾಮದ ಹೊನ್ನೇರುಗಳನ್ನು ಶ್ರೀಮಠದಿಂದ ಮಂಗಳವಾದ್ಯ ಹಾಗೂ ವಿವಿಧ ಜನಪದ ಕಲಾ ತಂಡಗಳೊಂದಿಗೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಜಮೀನುಗಳಿಗೆ ತೆರಳಿ ಭೂಮಿತಾಯಿಗೆ ಪೂಜೆ ಸಲ್ಲಿಸಿ ಹೊಸ ವರ್ಷದ ಕೃಷಿ ಕಾಯಕಕ್ಕೆ ಚಾಲನೆ ನೀಡಲಾಯಿತು.

ಹೊಸಮಠ, ಕುಂದೂರುಬೆಟ್ಟ, ಕುದೇರು, ಚುಂಚನಹಳ್ಳಿ, ಮಡಿವಾಳಸ್ವಾಮಿಮಠ, ಹೊನ್ನಲಗೆರೆ, ಕಳ್ಳಿಪುರ, ನರಗ್ಯಾತನಹಳ್ಳಿ, ಬೆನಕನಹಳ್ಳಿ, ಮಾದ್ರಹಳ್ಳಿ, ವೀರಪ್ಪ ಒಡೆಯರಹುಂಡಿ ಮೊದಲಾದ ಮಠಗಳ ಶ್ರೀಗಳು, ಗಣ್ಯರು, ಸುತ್ತಮುತ್ತಲ ಗ್ರಾಮಗಳ ಭಕ್ತಾದಿಗಳು ಭಾಗವಹಿಸಿದ್ದರು. ಜೆಎಸ್‌ಎಸ್ ಲಲಿತ ಕಲಾ ವೃಂದದವರು ಪ್ರಾರ್ಥಿಸಿದರು. ಶ್ರೀ ಅಂದಯ್ಯ ಶಿರೂರಮಠ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

## ರೋಬೋ ಆನೆ 'ಶಿವ' ಸಮರ್ಪಣೆ

ಭಗವಂತ ಸೃಷ್ಟಿ ಮಾಡಿರುವ ಪ್ರಾಣಿ ಪಕ್ಷಿಗಳಿಗೂ ಮನುಷ್ಯನ ಹಾಗೆಯೇ ಸ್ವತಂತ್ರವಾಗಿ ಬದುಕುವ ಹಕ್ಕಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ತಿಳಿಸಿದರು.

**ಶ್ರೀ ಸುತ್ತೂರು ಕ್ಷೇತ್ರದಲ್ಲಿ** 12 ಏಪ್ರಿಲ್ 2024 ಚಾಂದ್ರಮಾನ ಯುಗಾದಿಯಂದು ರೋಬೋ ಆನೆ 'ಶಿವ' ಸಮರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ಸಾಕುಪ್ರಾಣಿಗಳಿಗೆ ಇಂದಿನ ದಿನಗಳಲ್ಲಿ

ತುಂಬಾ ಮಾನ್ಯತೆಯನ್ನು ನೀಡಲಾಗುತ್ತಿದೆ. ಮನುಷ್ಯರು ಪ್ರಾಣಿಗಳೊಂದಿಗೆ ಪ್ರೀತಿಯಿಂದ ಇರಬೇಕು. ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲದಿದ್ದರೆ ಹೇಗೆ ಇರುತ್ತಿದ್ದ ಎಂಬುದನ್ನು ಯೋಚನೆ ಮಾಡಬೇಕು. ಮನುಷ್ಯನಂತೆಯೆ ಅವುಗಳೂ ಕೂಡ ಸ್ವಾತಂತ್ರ್ಯವನ್ನು ಬಯಸುತ್ತವೆ. ಆದ್ದರಿಂದ ಅವುಗಳನ್ನು ಕಟ್ಟಿಹಾಕಿ ಹಿಂಸಿಸಬಾರದು. ಇಂತಹ ಸಂದರ್ಭದಲ್ಲಿ ದೆಹಲಿಯ ಪೇಟಾ ಸಂಸ್ಥೆಯ ಮೂಲಕ ಶ್ರೀಮತಿ ಐಂದ್ರಿತಾ ರೇ ಹಾಗೂ ನಟ ಶ್ರೀ ದಿಗಂತ್ ದಂಪತಿಗಳು ಶ್ರೀಮಠಕ್ಕೆ ರೋಬೋ ಆನೆಯನ್ನು ಕೊಡುಗೆಯಾಗಿ ನೀಡುತ್ತಿರುವುದು, ಅವರಿಗೆ ಪ್ರಾಣಿಗಳ ಬಗ್ಗೆ ಇರುವ ಕಾಳಜಿಯನ್ನು ತೋರಿಸುತ್ತದೆ ಎಂದರು.

ಚಲನಚಿತ್ರ ಕಲಾವಿದರಾದ ಶ್ರೀಮತಿ ಐಂದ್ರಿತಾ ರೇರವರು ಪ್ರಾಣಿಗಳು ಆಹಾರ ಮತ್ತು ನೀರನ್ನು ಅರಸಿ ಕಾಡಿನಿಂದ ನಾಡಿಗೆ ಬರುತ್ತಿವೆ. ದಿನೇ ದಿನೇ ಮಾನವ ಮತ್ತು ಕಾಡು ಪ್ರಾಣಿಗಳ ಸಂಘರ್ಷ ಹೆಚ್ಚಾಗುತ್ತಿದೆ. ಜನರು ಆನೆಗಳಿಂದ ಹೆಚ್ಚಿನ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆನೆಗಳೂ ಕೂಡ ಜನರಿಂದ ಸ್ವಾತಂತ್ರ್ಯವಿಲ್ಲದೆ ನೋವನ್ನು ಅನುಭವಿಸುತ್ತಿವೆ. ಇಂತಹ ಸಂದರ್ಭದಲ್ಲಿ ಸುತ್ತೂರು ಶ್ರೀಮಠವು ರೋಬೋ ಆನೆಯನ್ನು ಬಳಸಲು ಪ್ರಾರಂಭಿಸುತ್ತಿರುವುದು ಶ್ಲಾಘನೀಯ ಎಂದರು.

ಕಲಾವಿದರಾದ ಶ್ರೀ ದಿಗಂತ್‌ರವರು ಪ್ರಾಣಿಗಳು ಕಾಡಿನಲ್ಲಿರಬೇಕು, ನಾಡಿನಲ್ಲಿರಬಾರದು. ಅವುಗಳನ್ನು ಸರಪಳಿಯಲ್ಲಿ ಕಟ್ಟಿಹಾಕಬಾರದು. ಕಾಡಿನಲ್ಲಿ ಸ್ವತಂತ್ರವಾಗಿ ಓಡಾಡುತ್ತಿರಬೇಕು. ಅವುಗಳನ್ನು ಸ್ವಾಭಾವಿಕವಾಗಿ ಬದುಕಲು ಬಿಡಬೇಕು. ಕೇರಳದಲ್ಲಿ ಇತ್ತೀಚೆಗೆ ನಡೆದ ಆನೆಗಳ ದಾಳಿಯಲ್ಲಿ ಅನೇಕ ಜನರು ಮೃತಪಟ್ಟಿರುತ್ತಾರೆ. ಸುತ್ತೂರು ಶ್ರೀಮಠವು ರೋಬೋ ಆನೆಯನ್ನು ಬಳಸುವಂತೆ ಇತರೆ ಧಾರ್ಮಿಕ ಸಂಸ್ಥೆಗಳವರೂ ಸಾಕಿರುವ ಆನೆಗಳನ್ನು ಸಹಜವಾಗಿ ಬದುಕಲು ಬಿಟ್ಟು, ರೋಬೋ ಆನೆಗಳನ್ನು ಬಳಸಲು ಪ್ರಯತ್ನಿಸಬೇಕು ಎಂದು ಹೇಳಿದರು.

ಪೇಟಾ ಸಂಸ್ಥೆಯ ಸಾರ್ವಜನಿಕ ಸಂಪರ್ಕ ವಿಭಾಗದ ಉಪಾಧ್ಯಕ್ಷರಾದ ಶ್ರೀ ಸಚಿನ್ ಬಂಗೇರ, ಹಿರಿಯ ಕೆಎಎಸ್ ಅಧಿಕಾರಿಗಳಾದ ಶ್ರೀ ಮಂಜುನಾಥ್‌ಸ್ವಾಮಿ, ಗೋಪಾಲಗೌಡ ಆಸ್ಪತ್ರೆಯ ಡಾ. ಸುಶ್ರುತ್‌ರವರುಗಳು ಮಾತನಾಡಿದರು. ಮಠಾಧಿಪತಿಗಳು, ಹರಗುರು ಚರಮೂರ್ತಿಗಳು, ಶ್ರೀಮಠದ ಭಕ್ತಾದಿಗಳು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು. ಶ್ರೀ ಜಿ.ಎಲ್. ತ್ರಿಪುರಾಂತಕ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕು. ಸಿಂಚನ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

## ಅಧ್ಯಾತ್ಮದ ಹಾದಿಯಲ್ಲಿ ಸಾಗಿದರೆ ಯಶಸ್ಸು ಸಾಧ್ಯ

ಅಧ್ಯಾತ್ಮದ ಹಾದಿಯಲ್ಲಿ ಸಾಗಿದರೆ ಯಶಸ್ಸು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

**ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ** ದಿನಾಂಕ 20.4.2024ರಂದು ನಡೆದ 2024ರ ಗಣರಾಜ್ಯೋತ್ಸವ, ರಾಷ್ಟ್ರಮಟ್ಟದ ಶಿಬಿರ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳ ಅಭಿನಂದನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ಎನ್‌ಸಿಸಿಯು ವಿದ್ಯಾರ್ಥಿಗಳಿಗೆ ರಾಷ್ಟ್ರಭಕ್ತಿಯನ್ನು ಮತ್ತು ಶಿಸ್ತನ್ನು ಬೆಳೆಸುವ ಅತ್ಯುತ್ತಮ ಮಾಧ್ಯಮವಾಗಿದೆ. ದೇಶ ಮತ್ತು ಗುರುಹಿರಿಯರ ಮೇಲೆ ಗೌರವ ಮತ್ತು ಭಕ್ತಿಯ ಭಾವ ಸಹಜವಾಗಿ ಮೂಡುವಂತೆ ಮಾಡುತ್ತದೆ. ನಮ್ಮ ದೇಶದ ಆಧ್ಯಾತ್ಮಿಕ ಸಂಪತ್ತು ದೊಡ್ಡದು. ಧಾರ್ಮಿಕತೆ ಮತ್ತು ಆಧ್ಯಾತ್ಮಿಕತೆ ಭಾರತೀಯರಲ್ಲಿ ರಕ್ತಗತವಾಗಿರುತ್ತದೆ. ಎನ್‌ಸಿಸಿಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳು ಅತ್ಯುತ್ತಮವಾದ ಸಾಧನೆಗಳನ್ನು ಮಾಡಿ ವಿಶೇಷ ಅನುಭವಗಳನ್ನು ಮತ್ತು ಆತ್ಮವಿಶ್ವಾಸವನ್ನು ಪಡೆದುಕೊಳ್ಳುತ್ತಾರೆ. ಇದು ಇತರ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕವಾದದ್ದು ಎಂದು ಹೇಳಿದರು.

ಕರ್ನಲ್ ರೋಹಿತ್ ಠಾಕೂರ್‌ರವರು ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಯುವ ಜನತೆಯ ಪಾತ್ರ ದೊಡ್ಡದು. ದೇಶದ ಯುವಜನತೆ ಹಲವು ನೆಲೆಗಳಲ್ಲಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಎನ್‌ಸಿಸಿ ಕೆಡೆಟ್‌ಗಳಿಗೆ ಶಿಸ್ತು ಮತ್ತು ಒಗ್ಗಟ್ಟಿನೊಂದಿಗೆ ಅಧ್ಯಾತ್ಮದ ಪ್ರಜ್ಞೆಯು ಅಗತ್ಯ. ಅಧ್ಯಾತ್ಮದ ಅನುಭವ ಜೀವನದಲ್ಲಿ ಸರಿ ತಪ್ಪುಗಳ ವಿವೇಚನೆ ಮಾಡುವುದಕ್ಕೆ ಸಹಕಾರಿ. ದೇಶವನ್ನು ಅಧ್ಯಾತ್ಮದ ಅನುಭವವು ಸದೃಢಗೊಳಿಸುತ್ತಾ ಬಂದಿದೆ. ದೇಶ ಕಟ್ಟುವ ನಿಟ್ಟಿನಲ್ಲಿ

ಹಿರಿಯರ ಪರಿಶ್ರಮವಿದೆ. ಯುವಜನತೆ ಮತ್ತು ಎನ್‌ಸಿಸಿ ಕೆಡೆಟ್‌ಗಳು ಇದನ್ನು ಅರಿತು ಸದೃಢ ದೇಶಕಟ್ಟುವಲ್ಲಿ ಭವಿಷ್ಯದ ಹೆಜ್ಜೆಗಳ ಬಗ್ಗೆ ಚಿಂತಿಸಬೇಕು. ದೇಶಪ್ರೇಮಿಗಳಿಂದ ಮಾತ್ರ ದೇಶದ ಸುಭದ್ರತೆ ಸಾಧ್ಯ. ಆದರೆ ಇಂದು ಸೇನೆಗೆ ಸೇರುವವರ ಸಂಖ್ಯೆ ಕಡಿಮೆಯಾಗುತ್ತಿರುವುದು ವಿಪರ್ಯಾಸ. ಈ ದಿಸೆಯಲ್ಲಿ ನಾವೆಲ್ಲ ಆಲೋಚಿಸಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದೆಹಲಿಯಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ್ದ 22 ಕೆಡೆಟ್‌ಗಳನ್ನು ಒಳಗೊಂಡಂತೆ ಶಿಬಿರ, ಭೂ, ಜಲ ಮತ್ತು ವಾಯು ಸೈನಿಕ ಶಿಬಿರಗಳಲ್ಲಿ ಭಾಗವಹಿಸಿದ 69 ಶಿಬಿರಾರ್ಥಿಗಳನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಕೆಡೆಟ್‌ಗಳು ಅನಿಸಿಕೆಗಳನ್ನು ಹಂಚಿಕೊಂಡರು. ಜೆಎಸ್‌ಎಸ್ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕು. ಎ.ಆರ್. ಸುಷ್ಮಿತಾ ಮತ್ತು ಕು. ಆರ್. ಕುಸುಮಾಬಾಯಿ ಪ್ರಾರ್ಥಿಸಿದರು. ಶ್ರೀಮತಿ ವಾಣಿಶ್ರೀ ವಂದಿಸಿದರು. ಡಾ. ಎಲ್. ವಿನಯ್‌ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

## ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ 16ನೇ ಪದವೀಧರರ ದಿನಾಚರಣೆಯಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆಯ ಆಯುಕ್ತರಾದ ಶ್ರೀಮತಿ ಸಿ. ಶಿಖಾರವರು ಮಾತನಾಡುತ್ತಿರುವುದು.

ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ ಎಂದು ವಾಣಿಜ್ಯ ತೆರಿಗೆಗಳ ಇಲಾಖೆಯ ಆಯುಕ್ತರಾದ ಶ್ರೀಮತಿ ಸಿ. ಶಿಖಾರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ** ನವಜ್ಯೋತಿ ಸಭಾಂಗಣದಲ್ಲಿ ದಿನಾಂಕ 29.4.2024ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 16ನೇ ಪದವೀಧರರ ದಿನಾಚರಣೆಯಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಯಾವಾಗಲೂ ದೊಡ್ಡ ಗುರಿಯನ್ನು ಇಟ್ಟುಕೊಂಡು ಸತತವಾಗಿ ಪ್ರಯತ್ನಿಸಿದರೆ ಕಂಡ ಕನಸನ್ನು ನನಸಾಗಿಸಲು ಸಾಧ್ಯ. ಇಂದಿನ ಯುವಜನತೆ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನದ ಕಡೆಗೆ ಗಮನಹರಿಸಬೇಕು. ಜೆಎಸ್‌ಎಸ್ ಮಹಿಳಾ ಕಾಲೇಜಿನ ಈ ವಾತಾವರಣದಲ್ಲಿ ಭಾರತೀಯ ಸಂಸ್ಕೃತಿಯೇ ಪ್ರತಿಬಿಂಬವಾಗಿದೆ. ವಿದ್ಯಾರ್ಥಿನಿಯರಿಗೆ ಸಮಯ ನಿರ್ವಹಣೆಯ ಜೊತೆಗೆ ಗಮನ ನಿರ್ವಹಣೆ ಅಗತ್ಯವಾಗಬೇಕೆಂದು ತಿಳಿಸಿದರು.

ಅಮೆರಿಕದ ಶ್ರೀಮತಿ ಶಾಲಿನಿ ಗುಪ್ತರವರು ಪದವಿಯನ್ನು ಪಡೆಯುವುದು ಮಹತ್ವದ ಹೆಜ್ಜೆ ಗುರುತು. ಯಶಸ್ಸನ್ನು ಗಳಿಸಲು ನಿರಂತರವಾದ ಅಧ್ಯಯನವೇ ಭದ್ರವಾದ ಅಡಿಪಾಯ. ಪ್ರತಿಯೊಬ್ಬರೂ ಹಣೆಬರಹದ ಬಗ್ಗೆ ಯೋಚಿಸದೆ ಸತತ ಪ್ರಯತ್ನದಿಂದ ಹೊಸ ಅದೃಷ್ಟವನ್ನು ಪಡೆಯಲು ಸಾಧ್ಯ ಎಂದು ಹೇಳಿದರು.

ಅಮೆರಿಕದ ಶ್ರೀಮತಿ ಅನುಪಮ ವಶಿಷ್ಠರವರು ತಂದೆ ತಾಯಿ ಮಾಡಿದ ತ್ಯಾಗವನ್ನು ಎಂದಿಗೂ ಮರೆಯಬಾರದು. ಇತರರ ಬಗ್ಗೆ ಯಾವಾಗಲೂ ಸಹಾನುಭೂತಿ, ನಮ್ರತೆಯನ್ನು ತೋರಬೇಕು. ಉದಾತ್ತ ಮತ್ತು ನೀತಿವಂತ ವ್ಯಕ್ತಿಗಳು ವಿನಮ್ರತೆಯನ್ನು ಎಂದಿಗೂ ಮರೆಯುವುದಿಲ್ಲ ಎಂದರು.

ಈ ಸಂದರ್ಭದಲ್ಲಿ 2022–23ನೆಯ ಶೈಕ್ಷಣಿಕ ಸಾಲಿನಲ್ಲಿ ಪದವಿ ಪಡೆದ 649 ವಿದ್ಯಾರ್ಥಿನಿಯರಲ್ಲಿ 21 ವಿದ್ಯಾರ್ಥಿನಿಯರು ಪದಕ ಹಾಗೂ ನಗದು ಬಹುಮಾನಗಳನ್ನು ಪಡೆದರು. 329 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿಯಲ್ಲಿ, 221 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸ್ನಾತಕೋತ್ತರ ವಿಭಾಗದಲ್ಲಿ 14 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿಯಲ್ಲಿ, 85 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ನೂತನ ಪದವೀಧರರಾದ ಕು. ಎಸ್.ಯು. ಛಂದೋಶ್ರೀ, ಕು. ಆರ್. ಶಾಂಭವಿ, ಕು. ಸೌಜನ್ಯ ಎಸ್. ಗಂಗಾವತಿ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕು. ವೈಷ್ಣವಿ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಎಂ. ಪೂರ್ಣಿಮ ಸ್ವಾಗತಿಸಿದರು. ಶೈಕ್ಷಣಿಕ ಡೀನ್ ಡಾ. ರೇಚಣ್ಣ ವಂದಿಸಿದರು. ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ 23.4.2024ರಂದು ನಡೆದ 266ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಬೆಂಗಳೂರು ಸಹೋದರರಾದ ವಿದ್ವಾನ್ ಎಂ.ಬಿ. ಹರಿಹರನ್ ಮತ್ತು ವಿದ್ವಾನ್ ಎಸ್. ಅಶೋಕ್‌ರವರುಗಳು ದ್ವಂದ್ವ ಗಾಯನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯ ಸಹಕಾರದಲ್ಲಿ ವಿದ್ವಾನ್ ಎಚ್.ಎಸ್. ಸುಧೀಂದ್ರ, ವಿದ್ವಾನ್ ಶಮಿತ್ ಎಸ್. ಗೌಡ ಹಾಗೂ ವಿದ್ವಾನ್ ಎಸ್. ಜನಾರ್ಧನ್‌ರವರುಗಳಿದ್ದಾರೆ

# ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಶ್ರೀ ಸುತ್ತೂರು ಕ್ಷೇತ್ರದಲ್ಲಿ ವಿವಿಧ ಶಿಬಿರಗಳು ನೆರವೇರಿದವು

***

## ಪಬ್ಲಿಕ್ ಶಾಲಾ ಶಿಕ್ಷಕರಿಗಾಗಿ ಏಪ್ರಿಲ್ 11 ರಿಂದ 13ರವರೆಗೆ ಶಿಬಿರವನ್ನು ಆಯೋಜಿಸಲಾಗಿತ್ತು

### ಅನುಭಾವದಿಂದಾದುದು ಭಾರತೀಯ ಸಂಸ್ಕೃತಿ



ಶಿಬಿರವನ್ನು ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ವಿ. ವಸಂತಕುಮಾರ್‌ರವರು ಉದ್ಘಾಟಿಸುತ್ತಿರುವುದು. ಶಿಬಿರದ ಸಂಚಾಲಕರು ಹಾಗೂ ಶಿಬಿರಾರ್ಥಿಗಳನ್ನು ಕಾಣಬಹುದು.

ಭಾರತೀಯ ಸಂಸ್ಕೃತಿಯು ಋಷಿ ಮುನಿಗಳ, ಸಂತರ, ಮಹಾಪುರುಷರ ಅನುಭಾವದಿಂದಾಗಿದೆ ಎಂದು ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ವಿ. ವಸಂತಕುಮಾರ್‌ರವರು ಹೇಳಿದರು.

ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ 'ಭಾರತೀಯ ಸಂಸ್ಕೃತಿ' ಎಂಬ ವಿಷಯ ಕುರಿತು ಅವರು ಮಾತನಾಡಿದರು. ಸಂಸ್ಕೃತಿಯು ಮನುಷ್ಯನ ಶೋಧ, ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಭಾರತೀಯ ಸಂಸ್ಕೃತಿಯು ಜಗತ್ತಿನ ಸಂಸ್ಕೃತಿಯಲ್ಲಿಯೇ ಅತ್ಯಂತ ಭಿನ್ನವಾದ ಸಂಸ್ಕೃತಿಯಾಗಿದ್ದು, ಜಗತ್ತಿನ ಯಾವುದೇ ಸಂಸ್ಕೃತಿ ನಾಶವಾದರೂ ಭಾರತೀಯ ಸಂಸ್ಕೃತಿಯು ನಾಶವಾಗುವುದಿಲ್ಲ. ಇದು ಒಂದು ಜೀವನ ಪದ್ಧತಿಯಾಗಿದೆ. ಬಾಹ್ಯ ಮತ್ತು ಆಂತರಿಕ ಸಂಸ್ಕೃತಿಯ ಪರಿಷ್ಕರಣೆ ವ್ಯಕ್ತಿಗೆ ಅವಶ್ಯಕವಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳು ಬಾಹ್ಯ ಸಂಸ್ಕೃತಿಗೆ ಹೆಚ್ಚಿನ ಆದ್ಯತೆ ನೀಡಿದರೆ ಭಾರತೀಯರು ಆಂತರಿಕ ಸಂಸ್ಕೃತಿಗೆ ಹೆಚ್ಚು ಮಹತ್ವವನ್ನು ನೀಡಿದ್ದಾರೆ. ಭೌತಿಕ ಸಂಸ್ಕೃತಿಯು ಎಷ್ಟು ಮಹತ್ವವೋ ಭಾವನಾತ್ಮಕ ಸಂಸ್ಕೃತಿಯು ಅಷ್ಟೇ ಮಹತ್ವವನ್ನು ಹೊಂದಿದೆ. ಸಂಸ್ಕಾರದಿಂದಲೇ ಸಂಸ್ಕೃತಿಯಾಗಿದೆ ಎಂದು ತಿಳಿಸಿದರು.

ಗದಗಿನ ಕನಕದಾಸ ಪದವಿಪೂರ್ವ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಸಿದ್ದು ಯಾಪಲಪರವಿಯವರು 'ತರಗತಿ ನಿರ್ವಹಣೆ' ವಿಷಯ ಕುರಿತು ಮಾತನಾಡುತ್ತಾ, ತರಗತಿಯಲ್ಲಿ ಶಿಕ್ಷಕರ ವರ್ತನೆಯು ಮೌಲ್ಯಯುತವಾಗಿ, ಸ್ಫೂರ್ತಿದಾಯಕವಾಗಿ ಆಕರ್ಷಣೆಯಿಂದ ಕೂಡಿರಬೇಕು. ಮೊದಲು ವಿದ್ಯಾರ್ಥಿಯ ಮನಸ್ಥಿತಿಯನ್ನು ಅರಿತು ಬದಲಾದ ವಿದ್ಯಾರ್ಥಿಗಳ ಮನೋಭಾವಕ್ಕೆ ಅನುಗುಣವಾಗಿ ಜ್ಞಾನವನ್ನು ನೀಡಬೇಕು. ಏಕೆಂದರೆ ಪ್ರತಿಯೊಂದು ರಾಷ್ಟ್ರದ ಯಶಸ್ಸಿನ ಹಿಂದೆ ಆ ರಾಷ್ಟ್ರದ ಶಿಕ್ಷಕರ ಪಾತ್ರ

ಅಪಾರವಿರುತ್ತದೆ. ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸ್ನೇಹದಿಂದ ವರ್ತಿಸಿ ಅವರ ಮನಸ್ಥಿತಿಗೆ ಅನುಗುಣವಾಗಿ ಅವರನ್ನು ಪ್ರೋತ್ಸಾಯಿಸಿ ವಿದ್ಯಾರ್ಥಿಗಳ ಬೆಳವಣಿಗೆಗೆ ಪ್ರೇರಕರಾಗಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಬಿ.ಎಂ. ನಂದಿನಿರವರು 'ಡಿಜಿಟಲ್ ಬೆದರಿಕೆಗಳು ಮತ್ತು ಸುರಕ್ಷತೆಗಳು' ವಿಷಯ ಕುರಿತು ಮಾತನಾಡುತ್ತಾ, ಡಿಜಿಟಲ್ ಬೆದರಿಕೆಗಳು ಹೆಚ್ಚು ವ್ಯಾಪಕವಾಗಿರುವ ಯುಗದಲ್ಲಿ ನಾವುಗಳು ಸೈಬರ್ ಸೆಕ್ಯೂರಿಟಿ ತಂತ್ರಗಳ ವಿಕಸನ ಮತ್ತು ಪರಿಣಾಮಕಾರತ್ವವನ್ನು ಅರ್ಥ ಮಾಡಿಕೊಳ್ಳವುದು ಬಹಳ ಮುಖ್ಯವಾಗಿದೆ. ಸೈಬರ್ ಸುರಕ್ಷತೆಯ ದೃಷ್ಟಿಯಿಂದ ಸಂಸ್ಥೆಗಳು ನಿಯಮಿತವಾಗಿ ತಮ್ಮ ಸಿಸ್ಟಂ ಸಾಫ್ಟ್‌ವೇರ್‌ಗಳನ್ನು ನವೀಕರಿಸಿ, ಬದಲಾದ ಪಾಸ್‌ವರ್ಡ್‌ಗಳನ್ನು ಬಳಸಬೇಕು ಎಂದು ತಿಳಿಸಿದರು.

ಶಿಬಿರದಲ್ಲಿ ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸ -ಧ್ಯಾನ ಹಾಗೂ ಸಂಜೆ ದೇಸಿ ಆಟಗಳ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ಪ್ರಾರ್ಥನೆಯ ನಂತರ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಶಿಬಿರದಲ್ಲಿ ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು, ಬಾಗೆ, ಮಾಲೂರು, ಧಾರವಾಡ, ಹೂವಿನಹಡಗಲಿ, ತಮಿಳುನಾಡಿನ ಊಟಿ ಹಾಗೂ ಇನ್ನೂ ಮುಂತಾದ ಕಡೆಯಿಂದ 108 ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ.

## ಶಿಕ್ಷಕರಿಗೆ ಉತ್ತಮ ಸಂವಹನ ಅಗತ್ಯ



ಶಿಬಿರದಲ್ಲಿ ನಿವೃತ್ತ ಪ್ರಾಂಶುಪಾಲರು ಹಾಗೂ ಖ್ಯಾತ ವಾಗ್ಮಿಗಳಾದ ಪ್ರೊ. ಎಂ. ಕೃಷ್ಣೇಗೌಡರವರು ಉಪನ್ಯಾಸ ನೀಡುತ್ತಿರುವುದು.

ಉತ್ತಮ ಸಂವಹನದಿಂದ ಮಾತ್ರ ಒಳ್ಳೆಯ ಶಿಕ್ಷಕರಾಗಲು ಸಾಧ್ಯ ಎಂದು ನಿವೃತ್ತ ಪ್ರಾಂಶುಪಾಲರು ಹಾಗೂ ಖ್ಯಾತ ವಾಗ್ಮಿಗಳಾದ ಪ್ರೊ. ಎಂ. ಕೃಷ್ಣೇಗೌಡರವರು ಹೇಳಿದರು.

ಶಿಬಿರದಲ್ಲಿ 'ಸಂವಹನ ಕೌಶಲ' ವಿಷಯದ ಕುರಿತು ಮಾತನಾಡಿದ ಅವರು ಇಂದಿನ ತಂತ್ರಜ್ಞಾನದ ಯುಗದಲ್ಲಿ ವಿದ್ಯಾರ್ಥಿಗಳು ವಿವಿಧ ಮೂಲಗಳಿಂದ ಜ್ಞಾನವನ್ನು ಸಂಗ್ರಹಿಸುತ್ತಾರೆ. ಆದರೆ ಅದು ಶಿಕ್ಷಕರಿಂದ ಪಡೆದ ಜ್ಞಾನಕ್ಕೆ ಸಮನಾಗಿರುವುದಿಲ್ಲ. ಶಿಕ್ಷಕರು ಪರಿಣಾಮಕಾರಿ ಸಂವಹನ ಕೌಶಲದ ಮೂಲಕ ವಿದ್ಯಾರ್ಥಿಗಳಿಗೆ ಜ್ಞಾನವನ್ನು ನೀಡಬೇಕು. ಪ್ರಾರಂಭದಲ್ಲಿ ಮಾನವರು ಸನ್ನೆಗಳ ಮೂಲಕ ಸಂವಹನ ಮಾಡುತ್ತಿದ್ದರು. ನಾಗರೀಕತೆ ಬೆಳೆದಂತೆ ಅಕ್ಷರ ಜ್ಞಾನ ಬೆಳೆದು ಶಬ್ದಗಳ ಮೂಲಕ ಸಂವಹನ ಪ್ರಾರಂಭವಾಯಿತು. ಆಧುನಿಕ ಜಗತ್ತಿನಲ್ಲಿ ಸಂವಹನ ಕೌಶಲವು ಮಹತ್ವದ ಪಾತ್ರವನ್ನು ವಹಿಸುತ್ತಿದೆ. ವ್ಯಕ್ತಿಯು ತನ್ನ ಭಾವನೆಗಳು, ಚಿಂತನೆಗಳು ಹಾಗೂ ಅಭಿಪ್ರಾಯಗಳನ್ನು ಸಂವಹನ ಕೌಶಲದಿಂದ ಅಭಿವ್ಯಕ್ತಪಡಿಸುತ್ತಾನೆ. ಶಿಕ್ಷಕರು ಉತ್ತಮ ಶಾಬ್ದಿಕ, ಅಶಾಬ್ದಿಕ

ಹಾಗೂ ಲಿಖಿತ ಸಂವಹನ ಕೌಶಲವನ್ನು ಪರಿಣಾಮಕಾರಿಯಾಗಿ ಬಳಸಿ ತಮ್ಮ ವೃತ್ತಿಯಲ್ಲಿ ಯಶಸ್ಸನ್ನು ಸಾಧಿಸಬಹುದೆಂದು ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿಯ ಸಹಾಯಕ ಪ್ರಾಧ್ಯಾಪಕರಾದ ಡಾ. ಶಿವನಾಂದ ಮನೋಹರ್‌ರವರು 'ತರಗತಿಯಲ್ಲಿ ಹದಿಹರೆಯದ ನಿರ್ವಹಣೆಗೆ ಪರಿಣಾಮಕಾರಿ ತಂತ್ರಗಳು' ವಿಷಯ ಕುರಿತು ಮಾತನಾಡುತ್ತಾ, ತಾರುಣ್ಯ ವ್ಯವಸ್ಥೆ ಎಂಬುದು ಮನುಷ್ಯ ಜೀವನದ ಅತ್ಯಂತ ಮಹತ್ವದ ಘಟ್ಟ, ಏಕೆಂದರೆ ವಿದ್ಯಾರ್ಥಿಗಳಲ್ಲಿ ಮಾನಸಿಕ ಹಾಗೂ ದೈಹಿಕವಾಗಿ ಅನೇಕ ಬದಲಾವಣೆಗಳು ಈ ಸಂದರ್ಭದಲ್ಲಿ ಕಂಡುಬರುತ್ತವೆ. ಈ ಅವಧಿಯು ಮನುಷ್ಯ ಜೀವನದ ಪ್ರಮುಖ ಘಟ್ಟವಾಗಿದ್ದು, ವ್ಯಕ್ತಿಯು ಏನನ್ನಾದರೂ ಸಾಧಿಸಬಹುದೆಂಬ ಉತ್ಸಾಹದಲ್ಲಿರುತ್ತಾನೆ. ನಾವು ಪೂರಕವಾದ ವಾತಾವರಣವನ್ನು ಕಲ್ಪಿಸಿ ವಿದ್ಯಾರ್ಥಿಗಳ ಮನಸ್ಸು ಮತ್ತು ನಡವಳಿಕೆಯನ್ನು ನಿಯಂತ್ರಿಸುವುದು ಬಹಳ ಮುಖ್ಯ. ಉತ್ತಮ ಹವ್ಯಾಸಗಳ ಕಡೆ ವಿದ್ಯಾರ್ಥಿಗಳ ಮನಸ್ಸನ್ನು ಕೇಂದ್ರೀಕರಿಸಿ ಸರಿಯಾದ ಮಾರ್ಗದಲ್ಲಿ ಅವರನ್ನು ಕೊಂಡೊಯ್ಯುವುದು ಶಿಕ್ಷಕರ ಅತ್ಯಂತ ಪ್ರಮುಖ ಕರ್ತವ್ಯವಾಗಿದೆ ಎಂದು ತಿಳಿಸಿದರು.

## ಕಥೆಗಳು ವಿದ್ಯಾರ್ಥಿಗಳಲ್ಲಿ ಸ್ವಯಂ ಪರಿಕಲ್ಪನೆ ಮೂಡಿಸುತ್ತವೆ

ಕಥೆಗಳು ವಿದ್ಯಾರ್ಥಿಗಳಲ್ಲಿ ಸ್ವಯಂ ಪರಿಕಲ್ಪನೆಯನ್ನು ಮೂಡಿಸುತ್ತವೆ ಎಂದು ಮೈಸೂರು ಆಕಾಶವಾಣಿ ಕೇಂದ್ರದ ಹಿರಿಯ ಉದ್ಘೋಷಕರಾದ ಶ್ರೀ ಪ್ರಭುಸ್ವಾಮಿ ಸಿ. ಮಳಿಮಠರವರು ಹೇಳಿದರು.

ಶಿಬಿರದಲ್ಲಿ ಏಪ್ರಿಲ್ 13ರಂದು 'ಪಾಠಗಳಲ್ಲಿ ಕಥೆ ಹೇಳುವ ತಂತ್ರಗಳ ಅಳವಡಿಕೆ' ಕುರಿತು ಅವರು ಮಾತನಾಡಿದರು. ಕಥೆ ಹೇಳುವ ತಂತ್ರವು ಒಂದು ಬೋಧನಾ ವಿಧಾನವಾಗಿದೆ. ಕಥೆ ಹೇಳುವ ವಿಧಾನವನ್ನು ಕೇವಲ ಭಾಷಾ ವಿಷಯಗಳಿಗೆ ಮಾತ್ರ ಸೀಮಿತಗೊಳಿಸಬಾರದು. ಇತರೆ ವಿಷಯಗಳ ಕಲಿಕೆಗೂ ಅದನ್ನು ಸೂಕ್ತವಾಗಿ ಅಳವಡಿಸಿಕೊಳ್ಳಬಹುದು. ತರಗತಿಯ ಕಲಿಕೆಯಲ್ಲಿ ಆಕರ್ಷಣೆಯನ್ನು ತರುವಲ್ಲಿ ಈ ವಿಧಾನವು ಬಹಳ ಸಹಕಾರಿಯಾಗಿದೆ. ಕಥೆ ಕೇಳುವುದರಿಂದ ವಿದ್ಯಾರ್ಥಿಗಳಲ್ಲಿ ಸ್ವಯಂ ಪರಿಕಲ್ಪನೆ ಹಾಗೂ ಕಲಿಕಾ ಆಸಕ್ತಿ ಉಂಟಾಗುತ್ತದೆ. ತರಗತಿಯಲ್ಲಿ ಶಿಕ್ಷಕರು ಸ್ಫೂರ್ತಿದಾಯಕ ಹಾಗೂ ಮೌಲ್ಯಾಧಾರಿತ ಕಥೆಗಳನ್ನು ಆಸಕ್ತಿದಾಯಕವಾಗಿ ಹೇಳುವುದರ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಪ್ರೇರೇಪಿಸಬಹುದೆಂದು ತಿಳಿಸಿದರು.

ಮೈಸೂರಿನ ಯುವರಾಜ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಶೇಖರ್ ನಾಯಕ್‌ರವರು 'ಆಹಾರ ಮತ್ತು ಪೋಷಣೆ' ಕುರಿತು ಮಾತನಾಡುತ್ತಾ, ಮನುಷ್ಯನು ಬದುಕಲು ಆಹಾರವು ಅವಶ್ಯಕವಾಗಿದೆ. ಪ್ರತಿನಿತ್ಯ ಸಮತೋಲನ ಆಹಾರವನ್ನು ಸೇವಿಸುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ. ನಾವು ಸೇವಿಸುವ ಆಹಾರವು ಪೋಷಕಾಂಶಗಳಿಂದ ಕೂಡಿರಬೇಕು. ಏಕೆಂದರೆ ಮನುಷ್ಯನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಮತೋಲನಭರಿತ ಆಹಾರವು ಅವಶ್ಯಕವಾಗಿದೆ. ಅದರಲ್ಲಿ ಕಾರ್ಬೋಹೈಡ್ರೇಟ್ಸ್, ಪ್ರೋಟೀನ್ಸ್, ವಿಟಮಿನ್ಸ್, ನಾರಿನಾಂಶಗಳು ಮುಂತಾದ ಪೋಷಕಾಂಶಗಳು ಅವಶ್ಯಕವಾಗಿ ಇರಬೇಕು. ಜೊತೆಗೆ ನಿಯಮಿತ ವ್ಯಾಯಾಮಗಳನ್ನು ಮಾಡುವುದರ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಅನಿಸಿಕೆಯನ್ನು ಹಂಚಿಕೊಂಡ ಬೆಂಗಳೂರಿನ ಶ್ರೀಮತಿ ಗಂಗಾಂಬಿಕ, ಶ್ರೀಮತಿ ಪ್ರತಿಭಾ, ಮಾಲೂರಿನ ಶ್ರೀ ಮಂಜುನಾಥ್, ಊಟಿಯ ಶ್ರೀ ಮುದ್ದು ಮಹದೇವ ಹಾಗೂ ಮಳವಳ್ಳಿಯ ಶ್ರೀಧರ್‌ರವರುಗಳು ಶಿಬಿರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಜೆ.ಪಿ. ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಸ್ಮಿತಾ ಕುರುಪ್‌ರವರು ಶಿಬಿರದ ವರದಿ ಮಂಡಿಸಿದರು. ಶ್ರೀಮತಿ ಕಾತ್ಯಾಯಿನಿ ಪ್ರಾರ್ಥಿಸಿದರು. ಶ್ರೀ ಬಸವರಾಜು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಡಾ. ಮಹೇಶ್‌ರವರು ವಂದಿಸಿದರು.

# ಆಯುರ್ವೇದ, ವಾಕ್–ಶ್ರವಣ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳಿಗಾಗಿ ಏಪ್ರಿಲ್ 15 ರಿಂದ 17ರವರೆಗೆ ವ್ಯಕ್ತಿತ್ವ ವಿಕಸನ ಶಿಬಿರವನ್ನು ಆಯೋಜಿಸಲಾಗಿತ್ತು

## ಕಠಿಣ ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ಸಾಧ್ಯ



ಶಿಬಿರಾರ್ಥಿಗಳೊಂದಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು

ಕಠಿಣ ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ಸಾಧ್ಯ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಹೇಳಿದರು.

ಶಿಬಿರದಲ್ಲಿ ದಿನಾಂಕ 17.4.2024 ರಂದು 'ಯಶಸ್ಸಿನ ಗುಟ್ಟು' ವಿಷಯ ಕುರಿತು ಅವರು ಮಾತನಾಡಿದರು. ನಮ್ಮ ಜೀವನದ ಯಶಸ್ಸಿನ ಗುಟ್ಟು ನಮ್ಮ ಕೈಯಲ್ಲೇ ಇರುತ್ತದೆ. ಉತ್ತಮ ಗುರಿ, ಸ್ಪಷ್ಟ ಯೋಜನೆ, ಧನಾತ್ಮಕ ಮನೋಭಾವ ಹಾಗೂ ಕಠಿಣ ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ಸಾಧಿಸಬಹುದು. ಯಶಸ್ಸು ಎಂಬುದು ಒಂದು ಪ್ರಕ್ರಿಯೆಯಾಗಿದ್ದು, ಒಳ್ಳೆಯ ಹವ್ಯಾಸಗಳೊಂದಿಗೆ ಗುರು–ಹಿರಿಯರ ಮಾರ್ಗದರ್ಶನದಲ್ಲಿ ಇದನ್ನು ಸಾಧಿಸಬೇಕು. ತ್ರೇತಾಯುಗ, ದ್ವಾಪರಯುಗ, ಕಲಿಯುಗ ಇರುವಂತೆ ಈಗಿನದನ್ನು ಆಯ್ಕೆಯಯುಗ ಎಂದು ಹೇಳಬಹುದು. ನಮ್ಮ ಸರಿಯಾದ ಆಯ್ಕೆ ನಮ್ಮನ್ನು ಯಶಸ್ಸಿನ ತುದಿಗೆ ತೆಗೆದುಕೊಂಡು ಹೋಗುತ್ತದೆ ಎಂದು ತಿಳಿಸಿದರು.

ಮೈಸೂರಿನ ಶಿಕ್ಷಣ ತಜ್ಞರು ಹಾಗೂ ಮನೋವಿಜ್ಞಾನಿಗಳಾದ ಡಾ. ಎನ್. ಅಂಬಿಕಾರವರು, ಸ್ವಸಾಮರ್ಥ್ಯದಿಂದ ಬದುಕುವುದೇ ನಿಜವಾದ ಜೀವನ. ಜೀವನದಲ್ಲಿ ನಾವು ಸಂತೋಷವಾಗಿರಬೇಕಾದರೆ ಬೇರೆಯವರೊಂದಿಗೆ ಹೋಲಿಕೆ ಮಾಡಿಕೊಳ್ಳುವುದನ್ನು ಬಿಡಬೇಕು. ಯಾವಾಗಲೂ ನಾವು ನಾವಾಗಿರಲು ಪ್ರಯತ್ನಿಸಬೇಕು. ತಂದೆ ತಾಯಿಗಳ ಹಣದಲ್ಲಿ ಬದುಕುವುದೇ ಜೀವನವಲ್ಲ. ನಮ್ಮ ಸ್ವಸಾಮರ್ಥ್ಯದಿಂದ ಬದುಕುವುದೇ ಆದರ್ಶಪ್ರಾಯವಾದುದು. ಮೊದಲು ನಮ್ಮನ್ನು ನಾವು ಪ್ರೀತಿಸಬೇಕು. ಜೀವನದಲ್ಲಿ ಹೆಚ್ಚು ನಿರೀಕ್ಷೆಗಳು ಬೇಡ. ಸಾಧನೆಗಳನ್ನು ಮಾಡುವಾಗ ಸರಿಯಾದ ಗುರಿ ಬೆನ್ನತ್ತಿದಾಗ ಮಾತ್ರ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು. ಸಂತೋಷವನ್ನು ಎಲ್ಲಿಯೂ ಹುಡುಕಬಾರದು ಅದು ನಮ್ಮೊಳಗೆ ಇರುತ್ತದೆ ಎಂದು ತಿಳಿಸಿದರು.

## ವಿದ್ಯಾರ್ಥಿಗಳಿಗೆ ಸ್ವಯಂ ವಿಮರ್ಶೆ ಅಗತ್ಯ



ಶಿಬಿರದಲ್ಲಿ ಮೈಸೂರು ಪ್ರೊಫೈಲ್ ಇನ್ ಸಂಸ್ಥಾಪಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಎಸ್.ವಿ. ವೆಂಕಟೇಶ್‌ರವರು ಉಪನ್ಯಾಸ ನೀಡುತ್ತಿರುವುದು. ವಿದ್ಯಾರ್ಥಿಗಳು ಆಸಕ್ತಿಯಿಂದ ಆಲಿಸುತ್ತಿರುವುದು.

ವಿದ್ಯಾರ್ಥಿಗಳಿಗೆ ಸ್ವಯಂ ವಿಮರ್ಶೆ ಅಗತ್ಯವೆಂದು ಮೈಸೂರು ಪ್ರೊಫೈಲ್ ಡಾಟ್ ಇನ್ ಸಂಸ್ಥಾಪಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಎಸ್.ವಿ. ವೆಂಕಟೇಶ್‌ರವರು ಹೇಳಿದರು.

ಶಿಬಿರದಲ್ಲಿ 'ಧನಾತ್ಮಕ ಮನೋಭಾವ' ವಿಷಯ ಕುರಿತು ಮಾತನಾಡಿದ ಅವರು ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನದೇ ಆದ ಶಕ್ತಿ ಸಾಮರ್ಥ್ಯಗಳಿರುತ್ತವೆ. ಅದನ್ನು ಅರಿತು, ತನ್ನ ಸಾಮರ್ಥ್ಯಗಳನ್ನು ಸರಿಯಾದ ನಿರ್ಧಾರಗಳೊಂದಿಗೆ ಬಳಕೆ ಮಾಡಿಕೊಂಡರೆ ಜೀವನದಲ್ಲಿ ಯಶಸ್ಸು ಸಾಧಿಸಬಹುದು. ಉತ್ತಮ ವಿದ್ಯಾರ್ಥಿಗೆ ಬುದ್ಧಿಶಕ್ತಿಯ ಜೊತೆಗೆ ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮದ ಅವಶ್ಯಕತೆಯಿದೆ. ನಮ್ಮ ಗುರಿಯನ್ನು ನಿರ್ಧರಿಸಿಕೊಂಡು ಅದನ್ನು ತಲುಪಲು ಸಾಧನೆ ಮಾಡಬೇಕು. ನಕರಾತ್ಮಕ ಚಿಂತನೆಗಳನ್ನು ದೂರವಾಡಿ ಸಕರಾತ್ಮಕ ಆಲೋಚನೆಗಳಿಂದ ಮುನ್ನಡೆಯಬೇಕು. ಸಮಾಜದಲ್ಲಿ ನಾವು ಕಾಣುವ ನಾಯಕರುಗಳು ಸಾಮಾನ್ಯ ವ್ಯಕ್ತಿಗಳೆ ಆಗಿದ್ದು, ಅವರ ಅಪ್ರತಿಮ ನಿರ್ಧಾರಗಳಿಂದ ಉತ್ತಮ ಸಾಧಕರಾಗಿದ್ದಾರೆ ಎಂದು ತಿಳಿಸಿದರು.

ಮೈಸೂರಿನ ಪ್ರಜ್ಞಾ ಕುಟೀರ ಆಯುರ್ವೇದ ಸಂಸ್ಥೆಯ ನಿರ್ದೇಶಕರಾದ ಡಾ. ಪೂರ್ಣಿಮಾ ಕೆ. ಮೂರ್ತಿರವರು ಮಾತನಾಡಿ ಭಾರತೀಯ ಸಂಸ್ಕೃತಿಯು ಅತ್ಯಂತ ಶ್ರೀಮಂತ ಹಾಗೂ ಪುರಾತನ ಸಂಸ್ಕೃತಿಯಾಗಿದ್ದು ವೈವಿಧ್ಯತೆಯಿಂದ ಕೂಡಿದೆ. ಇಲ್ಲಿ ಅನೇಕ ಭಾಷೆ, ವೇಷಭೂಷಣ, ಕಲೆ, ಆಚರಣೆ ಹಾಗೂ ಆಹಾರ ಪದ್ಧತಿಗಳನ್ನು ಕಾಣಬಹುದು. 'ವಸುದೈವ ಕುಟುಂಬಕಂ' ಎಂಬ ಮಂತ್ರದೊಂದಿಗೆ ನಾವೆಲ್ಲರು ಒಂದೇ ಎಂದು ಬದುಕುತ್ತಿದ್ದಾರೆ. ನಮ್ಮ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳು ಜೀವನದಲ್ಲಿ ಏನನ್ನೂ ಅನುಸರಿಸಬೇಕು, ಯಾವುದನ್ನು ತಿರಸ್ಕರಿಸಬೇಕು ಎಂಬುದನ್ನು ಇಡೀ ವಿಶ್ವಕ್ಕೆ ಸಾರಿವೆ. ನಮ್ಮ ಸಂಸ್ಕೃತಿಯು ತ್ಯಾಗ, ಗೌರವ, ಕರುಣೆ, ಪ್ರೀತಿ ಮುಂತಾದ ಮೌಲ್ಯಗಳನ್ನು ಒಳಗೊಂಡಿವೆ ಎಂದು ತಿಳಿಸಿದರು.

ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸದಲ್ಲಿ ಶಿಬಿರಾರ್ಥಿಗಳು ಪಾಲ್ಗೊಂಡರು. ದೇಸಿ ಆಟಗಳನ್ನು ಉತ್ಸಾಹದಿಂದ ಆಡಿದರು. ಸಂಜೆ ಸುತ್ತೂರು ಶ್ರೀಕ್ಷೇತ್ರ ದರ್ಶನದಲ್ಲಿ ಶ್ರೀ ಮೂಲಮಠ, ಶ್ರೀ ಸೋಮೇಶ್ವರ

ದೇವಸ್ಥಾನ, ಶ್ರೀ ಮಹದೇಶ್ವರರು ರಾಗಿ ಬೀಸಿದ ಕಲ್ಲು ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳ ದರ್ಶನ ಪಡೆದು ಪುನೀತ ಭಾವ ಹೊಂದಿದರು. ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆಗಳ ಮಾಹಿತಿಯನ್ನು ಆಸಕ್ತಿಯಿಂದ ತಿಳಿದುಕೊಂಡರು. ಪ್ರಾರ್ಥನೆ ಹಾಗೂ ಕಪಿಲಾರತಿ ಕಾರ್ಯಕ್ರಮವು ಕಪಿಲಾ ನದಿ ತೀರದಲ್ಲಿ ಶ್ರದ್ಧಾ ಭಕ್ತಿಯಿಂದ ನೆರವೇರಿತು. ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. ಶಿಬಿರದಲ್ಲಿ ಆಯುರ್ವೇದ, ವಾಕ್–ಶ್ರವಣ ಹಾಗೂ ನರ್ಸಿಂಗ್ ಕಾಲೇಜುಗಳಿಂದ 233 ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

ಸಮಾರೋಪ ಸಮಾರಂಭದಲ್ಲಿ ಅನಿಸಿಕೆಯನ್ನು ಹಂಚಿಕೊಂಡ ಆಯುರ್ವೇದಿಕ್ ಕಾಲೇಜಿನ ಅರ್ಜುನ್, ಎಂ.ಎಸ್. ತೇಜಸ್ವಿನಿ, ನರ್ಸಿಂಗ್ ಕಾಲೇಜಿನ ಅರುಣ್‌ಕುಮಾರ್, ಮಾಳವಿಕ, ವಾಕ್–ಶ್ರವಣ ಸಂಸ್ಥೆಯ ತೇಜಸ್ ಮತ್ತು ಶಿವಾನಿರವರುಗಳು ಶಿಬಿರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಎಂ.ಎಲ್. ರಾಜೇಂದ್ರ ಪ್ರಸಾದ್‌ರವರು ಶಿಬಿರದ ವರದಿ ಮಂಡಿಸಿದರು. ಕು. ದೀಪ್ತಿ ಪ್ರಾರ್ಥಿಸಿದರು. ಶ್ರೀ ಸಿ.ಎನ್. ಸುನೀಲ್ ಕುಮಾರ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಡಾ. ಹೆಚ್.ಎಸ್. ಹರ್ಷನ್ ಕುಮಾರ್ ವಂದಿಸಿದರು. ಶಿಬಿರದಲ್ಲಿ ಆಯುರ್ವೇದಿಕ್, ವಾಕ್–ಶ್ರವಣ ಹಾಗೂ ನರ್ಸಿಂಗ್ ಕಾಲೇಜುಗಳಿಂದ 233 ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

## ತಾಂತ್ರಿಕ ವಿದ್ಯಾರ್ಥಿಗಳಿಗೆ ಏಪ್ರಿಲ್ 19 ರಿಂದ 21ರವರೆಗೆ ವ್ಯಕ್ತಿತ್ವ ವಿಕಸನ ಶಿಬಿರವನ್ನು ಆಯೋಜಿಸಲಾಗಿತ್ತು

### ಸರಿಯಾದ ನಿರ್ಣಯದಿಂದ ಮಾತ್ರ ಉತ್ತಮ ನಾಯಕನಾಗಲು ಸಾಧ್ಯ



ಶಿಕ್ಷಣ ಸಲಹೆಗಾರರಾದ ಮೈಸೂರಿನ ಡಾ. ಸವಿತ ಲಕ್ಷ್ಮಣ್ ಜ್ಯೋತಿ ಬೆಳಗಿಸುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಶಿಬಿರದ ಸಂಚಾಲಕರು ಹಾಗೂ ಶಿಬಿರಾರ್ಥಿಗಳನ್ನು ಕಾಣಬಹುದು.

ಸರಿಯಾದ ನಿರ್ಣಯದಿಂದ ಮಾತ್ರ ಉತ್ತಮ ನಾಯಕನಾಗಲು ಸಾಧ್ಯ ಎಂದು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಬಿ. ಸುರೇಶ್‌ರವರು ಹೇಳಿದರು.

ಶಿಬಿರದಲ್ಲಿ 'ನಾಯಕತ್ವ ಗುಣಗಳು' ವಿಷಯ ಕುರಿತು ಅವರು ಮಾತನಾಡಿದರು. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕಾದರೆ ನಿರ್ದಿಷ್ಟ ಗುರಿ ಹಾಗೂ ನಿರಂತರ ಪ್ರಯತ್ನವಿರಬೇಕು. ನಾಯಕನಾದವನಿಗೆ ಉತ್ತಮ

ನಿರ್ಣಯ ಕೈಗೊಳ್ಳುವ ಸಾಮರ್ಥ್ಯ, ಸಹದ್ಯೋಗಿಗಳು ಹಾಗೂ ಎಲ್ಲರನ್ನು ಗೌರವಿಸುವ ಗುಣವಿರಬೇಕು. ಕೇವಲ ಜ್ಞಾನವಿದ್ದ ಮಾತ್ರಕ್ಕೆ ನಾಯಕನಾಗಲು ಸಾಧ್ಯವಿಲ್ಲ. ಅದರೊಂದಿಗೆ ಸಂದರ್ಭವನ್ನು ನಿಯಂತ್ರಿಸುವ ಸಾಮರ್ಥ್ಯವಿರಬೇಕು. ನಮ್ಮ ಸಂವಾದ-ಚರ್ಚೆಗಳು ನಮಗಿಂತ ಉತ್ತಮರಾಗಿರುವವರ ಜೊತೆಯಲ್ಲಿದ್ದರೆ ಅದಕ್ಕೆ ಬೆಲೆ ಬರುತ್ತದೆ. ಈ ಎಲ್ಲವನ್ನು ಅರಿತು ನಡೆದಾಗ ಮಾತ್ರ ಉತ್ತಮ ನಾಯಕನಾಗಲು ಸಾಧ್ಯ ಎಂದು ತಿಳಿಸಿದರು.

ಮೈಸೂರಿನ ಶಿಕ್ಷಣ ಸಲಹೆಗಾರರಾದ ಡಾ. ಸವಿತಾ ಲಕ್ಷ್ಮಣ್‌ರವರು ಮುಂದಿನ ದಿನಗಳಲ್ಲಿ ಭಾವನಾತ್ಮಕ ಬುದ್ಧಿಶಕ್ತಿಯು ಅತ್ಯಂತ ಮಹತ್ವದ ಸ್ಥಾನವನ್ನು ಗಳಿಸಲಿದೆ. ಭಾವನೆಗಳು ಮನಸ್ಸಿನ ಭಾಷೆಯಾಗಿದೆ. ಪ್ರತಿದಿನ ಮನುಷ್ಯನ ಮನಸ್ಸಿನಲ್ಲಿ ಸಾವಿರಾರು ಧನಾತ್ಮಕ ಹಾಗೂ ಋಣಾತ್ಮಕ ಆಲೋಚನೆಗಳು ಮೂಡಿ ನಮ್ಮ ಮೇಲೆ ಪ್ರಭಾವ ಬೀರುತ್ತವೆ. ವ್ಯಕ್ತಿಯು ಶೈಕ್ಷಣಿಕ ಅರ್ಹತೆಗಳಿಗಿಂತ ಅವನ ನಡವಳಿಕೆಗಳಿಂದ ಮೌಲ್ಯ ಪಡೆಯುತ್ತಾನೆ. ನಮ್ಮ ಕುಟುಂಬದಲ್ಲಿ ಹಾಗೂ ಕೆಲಸ ನಿರ್ವಹಿಸುವ ಸ್ಥಳದಲ್ಲಿ ಒಳ್ಳೆಯ ಸಂಬಂಧಗಳನ್ನು ಹೊಂದಬೇಕಾದರೆ, ಉತ್ತಮ ಸಂವಹನ, ಪರಸ್ಪರ ನಂಬಿಕೆ, ಗೌರವ, ಸಹಾನುಭೂತಿ ಮತ್ತು ಕ್ಷಮಾಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಲ್ಯಾನ್ಸಿ ಡಿಸೋಜರವರು ವಿದ್ಯಾರ್ಥಿಗಳು ಇಂದು ಶೈಕ್ಷಣಿಕ ಉದ್ದೇಶಗಳನ್ನು ಹೊರತುಪಡಿಸಿ ಬೇರೆ ಕಾರಣಗಳಿಗೆ ಹೆಚ್ಚು ಮೊಬೈಲ್ ಬಳಕೆ ಮಾಡುತ್ತಿದ್ದಾರೆ. ಇದು ಅವರ ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇದು ಅವರ ಶೈಕ್ಷಣಿಕ ಸಾಧನೆ, ಜೀವನದ ಗುಣಮಟ್ಟ, ಸ್ವ ನಿಯಂತ್ರಣದ ಮೇಲೆ ಪ್ರಭಾವ ಬೀರುತ್ತದೆ. ಇದರಿಂದ ಚಿಕ್ಕವಯಸ್ಸಿನಲ್ಲೇ ಮಾನಸಿಕ ಮತ್ತು ದೈಹಿಕ ಒತ್ತಡಕ್ಕೆ ಒಳಗಾಗಿ ಸಕ್ಕರೆ ಖಾಯಿಲೆ, ರಕ್ತದೊತ್ತಡ, ಹೃದಯಾಘಾತದಂತಹ ಖಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇಂದಿನ ವಿದ್ಯಾರ್ಥಿಗಳಿಗೆ ಮನೋವೈಜ್ಞಾನಿಕ ಸಲಹೆಯ ಅಗತ್ಯವಿದೆ. ಯುವಜನತೆಯಲ್ಲಿ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳ ಸದ್ಬಳಕೆ ಕುರಿತು ಅರಿವು ಮೂಡಬೇಕಾದುದು ಅತ್ಯಗತ್ಯ ಎಂದರು.

ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸ-ಧ್ಯಾನದಲ್ಲಿ ಶಿಬಿರಾರ್ಥಿಗಳು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡರು. ಸಂಜೆ ದೇಸಿ ಆಟಗಳನ್ನು ಸಂತೋಷದಿಂದ ಆಡಿದರು. ಪ್ರಾರ್ಥನೆಯ ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. ಶಿಬಿರದಲ್ಲಿ ಜೆಎಸ್‌ಎಸ್ ತಾಂತ್ರಿಕ ವಿಶ್ವವಿದ್ಯಾನಿಲಯದ ಎಂ.ಟೆಕ್, ಎಂ.ಬಿ.ಎ, ಎಂ.ಸಿ.ಎ, ಎಂ.ಎಸ್ಸಿ ಕಾಲೇಜುಗಳಿಂದ 162 ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

## ಆತ್ಮವಿಶ್ವಾಸದಿಂದ ಬದುಕಿನ ಸವಾಲುಗಳನ್ನು ಎದುರಿಸಬೇಕು

'ಆತ್ಮವಿಶ್ವಾಸದಿಂದ ಬದುಕಿನ ಸವಾಲುಗಳನ್ನು ಎದುರಿಸಬೇಕು' ಎಂದು ಮೈಸೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಡಿ.ಎಸ್. ಗುರುರವರು ಹೇಳಿದರು.

ಶಿಬಿರದಲ್ಲಿ ದಿನಾಂಕ 21.4.2024 ರಂದು 'ಸವಾಲುಗಳನ್ನು ಎದುರಿಸುವುದು' ವಿಷಯ ಕುರಿತು ಅವರು ಮಾತನಾಡಿದರು. ಬದಲಾವಣೆ ಜಗದ ನಿಯಮ ಎಂಬಂತೆ ಇಂದಿನ ಯುಗದಲ್ಲಿ ವಿಜ್ಞಾನದ ಆವಿಷ್ಕಾರಗಳೊಂದಿಗೆ ಜಗತ್ತು ಅನೇಕ ಬದಲಾವಣೆಗೆ ಒಳಪಟ್ಟಿದೆ. ಈ ಬದಲಾವಣೆ ಮಾನವನ ಜೀವನ ಶೈಲಿಯನ್ನು ಸುಲಭಗೊಳಿಸಿದೆ. ಪ್ರಕೃತಿಯೊಂದಿಗೆ ತಂತ್ರಜ್ಞಾನ ಮೇಳೈಸಿದಾಗ ಉತ್ತಮ ಆವಿಷ್ಕಾರಗಳು ಸಾಧ್ಯವಾಗುತ್ತವೆ. ಆ ಸಂದರ್ಭದಲ್ಲಿ ಬರುವ ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಮುನ್ನಡೆಯುವ ಕಲೆಯನ್ನು ಕರಗತಮಾಡಿಕೊಳ್ಳಬೇಕು. ಉತ್ತಮ ವ್ಯಕ್ತಿತ್ವ, ಆತ್ಮವಿಶ್ವಾಸ, ನೈತಿಕ ಪ್ರಜ್ಞೆ ಹಾಗೂ ಪ್ರಾಯೋಗಿಕ ಅನುಭವಗಳನ್ನು ರೂಪಿಸಿಕೊಂಡು ಜೀವನದ ಬದಲಾವಣೆಗಳಿಗೆ ಹೊಂದಿಕೊಳ್ಳಬೇಕು ಎಂದು ತಿಳಿಸಿದರು.



ಶಿಬಿರದಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳು ಹಾಗೂ ಸಂಚಾಲಕರು.

ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಸದಾಶಿವೇಗೌಡರವರು ಸ್ಪರ್ಧಾತ್ಮಕ ಪ್ರಪಂಚದಲ್ಲಿ ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ನಾವೀನ್ಯತೆಯೊಂದಿಗೆ ಮುನ್ನಡೆಯುವುದು ಅವಶ್ಯಕ. ನಮ್ಮ ಆಹಾರ, ಉಡುಗೆ, ತೊಡುಗೆ ಆಚರಣೆಗಳಲ್ಲಿ ಅನೇಕ ನಾವೀನ್ಯತೆಗಳನ್ನು ಕಾಣಬಹುದು. ಸೃಜನಶೀಲ ಆಲೋಚನೆಯೊಂದಿಗೆ ನಮ್ಮ ಕಾರ್ಯಕ್ಷಮತೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಪ್ರಪಂಚದ ಪ್ರಖ್ಯಾತ ಕಂಪನಿಗಳು ದೂರದೃಷ್ಟಿಯಿಂದ ನಾವೀನ್ಯತೆಯನ್ನು ಅಳವಡಿಸಿಕೊಂಡು ಉತ್ಪಾದನಾ ಕ್ಷೇತ್ರದಲ್ಲಿ ಉನ್ನತ ಸ್ಥಾನದಲ್ಲಿದೆ. ಆದರೆ ಕೆಲವು ಕಂಪನಿಗಳು ಬದಲಾದ ಸನ್ನಿವೇಶಕ್ಕೆ ಹೊಂದಿಕೊಳ್ಳದೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿರುವುದನ್ನು ಕಾಣಬಹುದು. ನಾವು ಸೋಲುಗಳನ್ನು ಒಪ್ಪಿಕೊಂಡು ಅವುಗಳಿಂದ ಪಾಠಕಲಿತು ಗೆಲುವಿನ ಮೆಟ್ಟಿಲನ್ನು ಏರಬೇಕು ಎಂದು ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಹೇಮಂತ್ ಮಹೇಶ್, ಬಾಲುಚಂದ್ರ, ಉತ್ತಮ್, ಅಮಥ್ಯ ಗಣೇಶ್‌ರವರುಗಳು ಶಿಬಿರದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡು ಮೆಚ್ಚುಗೆ ವ್ಯಕ್ತಪಡಿಸಿದರು.

ಎಂ.ಬಿ.ಎ ವಿಭಾಗದ ವಿದ್ಯಾರ್ಥಿನಿಯಾದ ಕು. ಚಂದುಶ್ರೀರವರು ಶಿಬಿರದ ವರದಿ ಮಂಡಿಸಿದರು. ಕು. ರಮ್ಯ ಮತ್ತು ಕು. ನಿಶಾ ಪ್ರಾರ್ಥಿಸಿದರು. ಕು. ಪ್ರಿಯಾರಮೇಶ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಡಾ. ಪ್ರದೀಪ್ ವಂದಿಸಿದರು.

## ಪ್ರಪಂಚದ ಐಕ್ಯತೆಯು ಭಾರತೀಯ ಆಧ್ಯಾತ್ಮಿಕ ಶಕ್ತಿಯಿಂದ ಮಾತ್ರ ಸಾಧ್ಯ

ಪ್ರಪಂಚದ ಐಕ್ಯತೆಯು ಭಾರತೀಯ ಆಧ್ಯಾತ್ಮಿಕ ಶಕ್ತಿಯಿಂದ ಮಾತ್ರ ಸಾಧ್ಯ ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಉಪಕುಲಪತಿಗಳಾದ ಪ್ರೊ. ಕೆ. ಚಿದಾನಂದಗೌಡರವರು ಹೇಳಿದರು.

ಶಿಬಿರದಲ್ಲಿ 'ಭಾರತೀಯ ಸಂಸ್ಕೃತಿ' ವಿಷಯ ಕುರಿತು ಅವರು ಮಾತನಾಡಿದರು. ಜೀವನದ ಉದ್ದೇಶವನ್ನು ಅರಿತು ಪರಿಪೂರ್ಣ ವ್ಯಕ್ತಿತ್ವವನ್ನು ಹೊಂದಲು ಆಧ್ಯಾತ್ಮಿಕ ಶಕ್ತಿಯು ನೆರವಾಗುತ್ತದೆ. ವಿದ್ಯಾರ್ಥಿಗಳಲ್ಲಿ ಇಂದ್ರಿಯ ನಿಗ್ರಹವಿದ್ದರೆ ಮಾತ್ರ ಜ್ಞಾನ ಲಭಿಸುತ್ತದೆ. ಈ ಜ್ಞಾನವನ್ನು ಹಣಗಳಿಕೆಗೆ ಮಾತ್ರ ಸೀಮಿತಗೊಳಿಸದೆ ಸಮಾಜದ ಒಳಿತಿಗಾಗಿ ಸತ್ಕಾರ್ಯಗಳಿಗೆ ಉಪಯೋಗಿಸಬೇಕು. ಇಂದಿನ ದಿನಮಾನಗಳಲ್ಲಿ ಸಮಾಜದಲ್ಲಿ ಶಾಂತಿ, ನೆಮ್ಮದಿ, ಸಂಬಂಧಗಳು ಹದಗೆಡುತ್ತಿರುವುದನ್ನು ನಾವು ಕಾಣುತ್ತೇವೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಆಧ್ಯಾತ್ಮಿಕ ಅರಿವಿನ ಅವಶ್ಯಕತೆಯಿದೆ. ಇದು ಸಾಮಾಜಿಕ, ನೈತಿಕ ಹಾಗೂ ಮಾನವೀಯ



ಶಿಬಿರದಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ. ಚಿದಾನಂದಗೌಡರವರು 'ಭಾರತೀಯ ಸಂಸ್ಕೃತಿ' ವಿಷಯ ಕುರಿತು ಮಾತನಾಡಿದರು.

ಮೌಲ್ಯಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ ಎಂದು ತಿಳಿಸಿದರು.

ಮಹಾಜನ ಸ್ನಾತಕೋತ್ತರ ಶಿಕ್ಷಣ ಕೇಂದ್ರದ ವ್ಯವಹಾರ ಆಡಳಿತ ವಿಭಾಗದ ಪ್ರಾಧ್ಯಾಪಕರಾದ ಡಾ. ಹರೀಶ್ ಮಾಚಯ್ಯರವರು ಜೀವನದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಅವಕಾಶಗಳಾಗಿ ಪರಿವರ್ತಿಸಿಕೊಂಡಾಗ ಮಾತ್ರ ಯಶಸ್ಸು ಸಾಧ್ಯ. ನಾವು ದೂರದೃಷ್ಟಿ ಇಟ್ಟುಕೊಂಡು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಬೇಕು. ವಿಶಾಲ ಆಲೋಚನೆಗಳೊಂದಿಗೆ ಸಮಸ್ಯೆಗಳ ಸ್ಪಷ್ಟ ಮೂಲಗಳನ್ನು ಅರಿತು ಸರಳ ಪರಿಹಾರಗಳನ್ನು ಕಂಡುಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಸಂವಹನದಲ್ಲಿ ಭಾಷೆಯ ನಿಖರತೆ, ಸ್ಪಷ್ಟತೆ ಅವಶ್ಯಕ. ಸಮಸ್ಯೆಗಳನ್ನು ಸರಳವಾದ ಪರಿಹಾರೋಪಾಯಗಳಿಂದ ಬಗೆಹರಿಸುವ ಕಲೆಯನ್ನು ರೂಢಿಸಿಕೊಳ್ಳಬೇಕೆಂದು ತಿಳಿಸಿದರು.

## ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಹಾಯಕ ದಂತವೈದ್ಯರಿಗಾಗಿ ಏಪ್ರಿಲ್ 23 ಮತ್ತು 24 ರಂದು ವ್ಯಕ್ತಿತ್ವ ವಿಕಸನ ಶಿಬಿರವನ್ನು ಆಯೋಜಿಸಲಾಗಿತ್ತು

### ಭಾರತೀಯ ಸಂಸ್ಕೃತಿಯು ನಿತ್ಯ ನಿರಂತರ

ಭಾರತೀಯ ಸಂಸ್ಕೃತಿಯು ನಿತ್ಯ ನಿರಂತರ ಎಂದು ಮೈಸೂರು ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಮಹಾಮೇಧಾನಂದಜೀರವರು ಹೇಳಿದರು.

ಶಿಬಿರದಲ್ಲಿ 'ಭಾರತೀಯ ಸಂಸ್ಕೃತಿ' ವಿಷಯ ಕುರಿತು ಅವರು ಮಾತನಾಡಿದರು. ಭಾರತೀಯ ಸಂಸ್ಕೃತಿಯು ಅತ್ಯಂತ ಪ್ರಾಚೀನವಾದುದ್ದು, ಅದರೊಂದಿಗೆ ನಮ್ಮ ಸಾಮಾಜಿಕ, ಧಾರ್ಮಿಕ ಹಾಗೂ ಜೀವನದ ಮೂಲ ಬೇರುಗಳು ವಿಕಾಸಗೊಂಡಿವೆ. ಜಗತ್ತಿನ ಪ್ರಮುಖ ನಾಗರೀಕತೆಗಳಾದ ಈಜಿಪ್ಟ್, ಗ್ರೀಸ್, ಮೆಸಪಟೋಮಿಯಾ ಮುಂತಾದವುಗಳು ನಾಶ ಹೊಂದಿವೆ. ಆದರೆ ನಮ್ಮ



ಮೈಸೂರಿನ ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಮಹಾಮೇಧಾನಂದಜೀರವರು ಶಿಬಿರವನ್ನು ಉದ್ಘಾಟಿಸಿದರು. ಚಿತ್ರದಲ್ಲಿ ಶಿಬಿರದ ಸಂಚಾಲಕರು ಹಾಗೂ ಶಿಬಿರಾರ್ಥಿಗಳನ್ನು ಕಾಣಬಹುದು.

ಸಿಂಧು ನಾಗರೀಕತೆಯು ಸುಮಾರು ಎಂಟು ಸಾವಿರ ವರ್ಷಗಳಿಂದಲೂ ನಿತ್ಯ ನಿರಂತರವಾಗಿದೆ. ಈ ನಾಗರೀಕತೆಯಲ್ಲಿರುವ ಮೌಲ್ಯಗಳು, ಸಾಮಾಜಿಕ ರಚನೆಗಳು ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಗೊಂಡು ಬಂದಿವೆ. ಪ್ರತಿಯೊಂದು ನಾಗರೀಕತೆಯು ತಮ್ಮದೇ ಆದ ತತ್ವವನ್ನು ಒಳಗೊಂಡಿದ್ದು ಜೀವನದ ಸತ್ಯವನ್ನು ಹುಡುಕುವಲ್ಲಿ ಅನೇಕ ಪ್ರಯತ್ನಗಳನ್ನು ಮಾಡಿವೆ. ಭಾರತೀಯ ಸಂಸ್ಕೃತಿಯು ಪ್ರಕೃತಿಯ ಶಕ್ತಿಯಿಂದ ಅಸ್ತಿತ್ವವನ್ನು ಪಡೆದುಕೊಂಡಿದೆ ಎಂದು ತಿಳಿಸಿದರು.

ಭದ್ರಾವತಿಯ ನಯನಾ ಆಸ್ಪತ್ರೆಯ ಸ್ತ್ರೀರೋಗ ತಜ್ಞರಾದ ಶ್ರೀಮತಿ ಡಾ. ವೀಣಾ ಎಸ್. ಭಟ್‌ರವರು ಮಾತನಾಡಿ ಪ್ರಾರಂಭದ ದಿನಗಳಲ್ಲಿ ಜನರಲ್ಲಿ ದಡಾರ, ಕಾಲರಗಳಂತಹ ರೋಗಗಳು ಹೆಚ್ಚು ಕಂಡು ಬರುತ್ತಿದ್ದವು. ಪ್ರಸ್ತುತ ದಿನಗಳಲ್ಲಿ ಸಕ್ಕರೆ, ರಕ್ತದೊತ್ತಡ, ಹೃದಯ ಹಾಗೂ ಕ್ಯಾನ್ಸರ್‌ನಂತಹ ದೀರ್ಘಕಾಲ ಕಾಡುವ ಕಾಯಿಲೆಗಳು ಕಂಡುಬರುತ್ತಿವೆ. ವೈದ್ಯರಾದವರು ಕೇವಲ ರೋಗಿಗಳಿಗೆ ಚಿಕಿತ್ಸೆಗಳನ್ನು ನೀಡಿದರೆ ಸಾಲದು, ರೋಗಿಯ ಮನಸ್ಥಿತಿಯನ್ನು ಅರಿತು ಅವರನ್ನು ಪ್ರೀತಿಯಿಂದ ಮಾತನಾಡಿಸಿ ಆತ್ಮಸ್ಥೈರ್ಯವನ್ನು ತುಂಬಬೇಕು. ವೈದ್ಯಕೀಯ ವಿದ್ಯಾರ್ಥಿಗಳು ಕೇವಲ ಜ್ಞಾನ ಸಂಪಾದನೆ ಮಾಡಿದರೆ ಸಾಲದು ಜೊತೆಗೆ ಸಹಾನುಭೂತಿ, ಪರಹಿತ ಚಿಂತನೆ, ಕರುಣೆ, ಪ್ರೀತಿ, ದಯೆ ಮೊದಲಾದ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸದಲ್ಲಿ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ದೇಸಿ ಆಟಗಳನ್ನು ಉತ್ಸಾಹದಿಂದ ಆಡಿದರು. ಸಂಜೆ ಸುತ್ತೂರು ಶ್ರೀಕ್ಷೇತ್ರ ದರ್ಶನದಲ್ಲಿ ಮೂಲ ಕರ್ತೃಗದ್ದುಗೆ ಮೂಲಮಠ, ಸೋಮೇಶ್ವರ ದೇವಸ್ಥಾನ, ಮಹದೇಶ್ವರರು ರಾಗಿ ಬೀಸಿದ ಕಲ್ಲು, ನಾರಾಯಣಸ್ವಾಮಿ ದೇವಸ್ಥಾನ ಹಾಗೂ ವೀರಭದ್ರೇಶ್ವರ ದೇವಸ್ಥಾನಗಳ ದರ್ಶನ ಪಡೆದು ಪುನೀತ ಭಾವ ಹೊಂದಿದರು. ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆಗಳ ಮಾಹಿತಿಯನ್ನು ಆಸಕ್ತಿಯಿಂದ ತಿಳಿದುಕೊಂಡರು. ಪ್ರಾರ್ಥನೆ ಹಾಗೂ ಕಪಿಲಾರತಿಯು ನದಿ ತೀರದಲ್ಲಿ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ನದಿಗಳ ಮಹತ್ವ ಮತ್ತು ಪರಿಸರ ಸಂರಕ್ಷಣೆ ಕುರಿತು ಸುತ್ತೂರು ಜೆಎಸ್ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಜೆ.ಎಲ್. ತ್ರಿಪುರಾಂತಕ ಮಾತನಾಡಿದರು. ನಂತರ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಶಿಬಿರದಲ್ಲಿ ವೈದ್ಯಕೀಯ – ಸ್ನಾತಕೋತ್ತರ ಹಾಗೂ ಸಹಾಯಕ ದಂತವೈದ್ಯ ಕಾಲೇಜಿನಿಂದ 115 ಮಂದಿ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

## ಪ್ರಕೃತಿ ಸಂಗದಿಂದ ಪರಮ ಸಂತೋಷ ಸಾಧ್ಯ



ಶಿಬಿರದಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳು ಹಾಗೂ ಸಂಚಾಲಕರು.

ಪ್ರಕೃತಿ ಸಂಗದಿಂದ ಪರಮ ಸಂತೋಷ ಸಾಧ್ಯ ಎಂದು ಲೇಖಕರಾದ ಶ್ರೀ ಹರಿ ರವಿಕುಮಾರ್‌ರವರು ಹೇಳಿದರು.

ಶಿಬಿರದಲ್ಲಿ ದಿನಾಂಕ 24.4.2024 ರಂದು 'ಸಂತೋಷದ ರಹಸ್ಯ' ವಿಷಯ ಕುರಿತು ಅವರು ಮಾತನಾಡಿದರು. ಪ್ರಕೃತಿಯಲ್ಲಿನ ಗಿರಿ–ಶಿಖರ, ನದಿ, ಸೂರ್ಯ, ಚಂದ್ರ, ಮಳೆ ಮೊದಲಾದವುಗಳು ಮಾನವನ ಸಂತೋಷಕರ ಜೀವನಕ್ಕೆ ಕಾರಣವಾಗಿವೆ. ಪ್ರಕೃತಿಯಲ್ಲಿನ ಸೊಬಗನ್ನು ಅನುಭವಿಸಿ ಆನಂದವನ್ನು ಪಡೆಯಬೇಕು. ಇಂದ್ರಿಯದಿಂದ ಲಭಿಸುವ ಸುಖವು ಕ್ಷಣಿಕವಾದುದು. ಪ್ರಕೃತಿಯಲ್ಲಿನ ಪರಮಾನಂದವು ಶಾಶ್ವತವಾದುದು. ಪ್ರಕೃತಿಯಂತೆ ಪರೋಪಕಾರಿಗಳಾದರೆ ಸಂತೋಷವನ್ನು ಅನುಭವಿಸಬಹುದು. ಮನುಷ್ಯನು ಕಲೆ, ಸಂಗೀತ, ಸಾಹಿತ್ಯದ ಒಲವನ್ನು ಹೊಂದಿರಬೇಕು. ಇದರಿಂದ ನಾವು ಭಾವನಾತ್ಮಕ ಸಂತೋಷವನ್ನು ಹೊಂದಬಹುದು. ಯಾವ ವ್ಯಕ್ತಿ ಪ್ರಕೃತಿಯ ಸಂಗ ಮತ್ತು ಸತ್ಸಂಗವನ್ನು ಮಾಡುತ್ತಾನೋ ಅವನು ನೆಮ್ಮದಿಯ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸ್ವಾಮಿ ವಿವೇಕಾನಂದ ಯೂತ್‌ಮೂಮೆಂಟ್‌ನ ಸಲಹೆಗಾರರಾದ ಡಾ. ಎಂ.ಎ. ಬಾಲಸುಬ್ರಹ್ಮಣ್ಯರವರು ಮಾತನಾಡಿ, ಉತ್ತಮ ನಾಯಕನು ಸ್ಫೂರ್ತಿದಾಯಕ ವ್ಯಕ್ತಿತ್ವವನ್ನು ಹೊಂದಿರುತ್ತಾನೆ. ಅವನು ತನ್ನೊಂದಿಗಿರುವವರನ್ನು ಉತ್ತಮ ದಾರಿಯಲ್ಲಿ ಮುನ್ನಡೆಸುತ್ತಾನೆ. ತಾನು ಯಾವುದೇ ಕಾರ್ಯ ಮಾಡಿದರೂ ಅದರ ಸ್ಪಷ್ಟ ಪರಿಕಲ್ಪನೆ ಇರುತ್ತದೆ. ಯಾವುದೇ ಕೆಲಸವನ್ನಾದರೂ ಹೇಗೆ ಸಂಘಟಿಸಬೇಕು, ಜನರು ಏನು ಬಯಸುತ್ತಾರೆಂಬ ತಿಳುವಳಿಕೆ ಇರುತ್ತದೆ. ಅವನು ಸೋಲು ಮತ್ತು ಗೆಲವುಗಳನ್ನು ಸಮಾನವಾಗಿ ಸ್ವೀಕರಿಸಿ ತನ್ನ ಜೊತೆಯಲ್ಲಿರುವವರನ್ನು ಮುನ್ನಡೆಸುತ್ತಾನೆ ಎಂದು ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಅನಿಸಿಕೆಯನ್ನು ಹಂಚಿಕೊಂಡ ಶಿಬಿರಾರ್ಥಿಗಳಾದ ವೈದ್ಯಕೀಯ ಕಾಲೇಜಿನ ಡಾ. ದೀಕ್ಷಿತಾ, ಡಾ. ದರ್ಶನ್, ದಂತ ವೈದ್ಯಕೀಯ ಕಾಲೇಜಿನ ಡಾ. ಗ್ಲೆನ್ ಮಾಥ್ಯೂ, ಡಾ. ಸುಮುಖಿ ಎಸ್. ರಾವ್‌ರವರುಗಳು ಶಿಬಿರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಪುರುಷೋತ್ತಮ ಶಾಸ್ತ್ರಿರವರು ಶಿಬಿರದ ವರದಿ ಮಂಡಿಸಿದರು. ಡಾ. ಮಾನಸ ಪ್ರಾರ್ಥಿಸಿದರು. ಡಾ. ವಿಕ್ರಾಂತ್ ಅರೋರ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಡಾ. ಗಿರೀಶ್ ವಂದಿಸಿದರು.

# ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶೇಷ ಪ್ರಾಮಾಣಿಕ ಗ್ರಂಥಾಲಯ ಉದ್ಘಾಟನೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಮೈಂಡ್ಸ್ ಯುನೈಟೆಡ್ ಟ್ರಸ್ಟ್ ಮತ್ತು ಇನ್ಫೋಸಿಸ್ ಪ್ರತಿಷ್ಠಾನದ ಸಹಕಾರದೊಂದಿಗೆ ಸ್ಥಾಪಿಸಿರುವ 'ವಿಶೇಷ ಪ್ರಾಮಾಣಿಕ ಗ್ರಂಥಾಲಯ'ವನ್ನು ಪದ್ಮಶ್ರೀ ಪುರಸ್ಕೃತರು ಮತ್ತು ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆಯ ನಿವೃತ್ತ ಪ್ರಾಧ್ಯಾಪಕರಾದ ಡಾ. ಸಿ.ಆರ್. ಚಂದ್ರಶೇಖರ್‌ರವರು ಉದ್ಘಾಟಿಸಿದರು. ಡಾ. ಟಿ.ಎಸ್. ಸತ್ಯನಾರಾಯಣರಾವ್, ಡಾ. ಟಿ.ಎಂ. ಪ್ರಮೋದಕುಮಾರ್, ಡಾ. ಎಂ. ಕಿಶೋರ್, ಡಾ. ಸಿ.ಪಿ. ಮಧು ಮತ್ತು ಡಾ. ಹೆಚ್. ಬಸವನಗೌಡಪ್ಪ ಮೊದಲಾದವರುಗಳಿದ್ದಾರೆ.

**ಮೈಸೂರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ** ಮೈಂಡ್ಸ್ ಯುನೈಟೆಡ್ ಟ್ರಸ್ಟ್ ಮತ್ತು ಇನ್ಫೋಸಿಸ್ ಪ್ರತಿಷ್ಠಾನದ ಸಹಕಾರದೊಂದಿಗೆ ಸ್ಥಾಪಿಸಿರುವ 'ವಿಶೇಷ ಪ್ರಾಮಾಣಿಕ ಗ್ರಂಥಾಲಯ'ವನ್ನು ದಿನಾಂಕ 16.4.2024ರಂದು ಪದ್ಮಶ್ರೀ ಪುರಸ್ಕೃತರು ಮತ್ತು ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆಯ ನಿವೃತ್ತ ಪ್ರಾಧ್ಯಾಪಕರಾದ ಡಾ. ಸಿ.ಆರ್. ಚಂದ್ರಶೇಖರ್‌ರವರು ಉದ್ಘಾಟಿಸಿ, ವಿಶ್ವ ಆರೋಗ್ಯ ದಿನದ ಪ್ರಯುಕ್ತ "ನನ್ನ ಆರೋಗ್ಯ ನನ್ನ ಹಕ್ಕು" ವಿಷಯ ಕುರಿತು ಮಾತನಾಡಿದರು.

ಆರೋಗ್ಯ ಸೌಲಭ್ಯಗಳಲ್ಲಿ ರೋಗಿಗಳ ಸೇವೆಯು ಪ್ರಮುಖವಾದುದು. ನಿತ್ಯವೂ ಸಾವಿರಾರು ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರುಗಳು ಚಿಕಿತ್ಸೆಯನ್ನು ಪಡೆಯಲು ಆಸ್ಪತ್ರೆಗೆ ಭೇಟಿ ನೀಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗುತ್ತಾರೆ. ಹೀಗೆ ಜನರು ಸಾಕಷ್ಟು ಸಮಯವನ್ನು ಆಸ್ಪತ್ರೆಗಳಲ್ಲಿ ಕಳೆಯುತ್ತಾರೆ. ಮನುಷ್ಯನಿಗೆ ಸಮಯವು ಅತ್ಯಂತ ಉಪಯುಕ್ತವಾದುದು. ಅದನ್ನು ಸಾಧ್ಯವಾದಷ್ಟು ಜ್ಞಾನಾರ್ಜನೆ ಮಾಡುತ್ತಾ ಸದುಪಯೋಗಪಡಿಸಿಕೊಳ್ಳಬೇಕು. ಜೆಎಸ್‌ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ಭೇಟಿ ನೀಡುವ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರುಗಳಿಗೆ ಜ್ಞಾನಾರ್ಜನೆ ಮತ್ತು ಸಮಯದ ಸದುಪಯೋಗಪಡಿಸಿಕೊಳ್ಳಲು ಹೆಚ್ಚಿನ ಅನುಕೂಲವಾಗುವಂತೆ ಈ ವಿಶೇಷ ಪ್ರಾಮಾಣಿಕ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ. ಈ ಗ್ರಂಥಾಲಯದಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಸಾಹಿತ್ಯಕ, ಆಧ್ಯಾತ್ಮಿಕ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿಗಳುಳ್ಳ ಪುಸ್ತಕಗಳು ಲಭ್ಯವಿವೆ. ಇದು ಸೋಮವಾರದಿಂದ ಶನಿವಾರದವರೆಗೆ ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಕಾರ್ಯನಿರ್ವಹಿಸುತ್ತದೆ. ಹೊರರೋಗಿ ಮತ್ತು ಒಳರೋಗಿಗಳು, ಅವರ ಕುಟುಂಬದ ಸದಸ್ಯರುಗಳು ಯಾವುದೇ ಪುಸ್ತಕವನ್ನು ಕನಿಷ್ಠ ವೆಚ್ಚದಲ್ಲಿ ಖರೀದಿಸಬಹುದು ಅಥವಾ ಎರವಲು ಪಡೆದು ಓದಿ ಮರಳಿಸಬಹುದು.

ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಸಿ.ಪಿ. ಮಧು, ಮನೋವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಕಿಶೋರ್ ಹಾಗೂ ವಿಭಾಗದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಕಲಾವಿದ ಲಿಯೋನಾರ್ಡೊ ಡ ವಿಂಚಿ ವಿಶ್ವಕಲಾ ದಿನಾಚರಣೆ

**ಧಾರವಾಡದ ಜೆಎಸ್‌ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಮತ್ತು ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿಯ** ವತಿಯಿಂದ ದಿನಾಂಕ: 15.04.2024ರಂದು ಅಪ್ರತಿಮ ಕಲಾವಿದರಾದ ಲಿಯೋನಾರ್ಡೊ ಡ ವಿಂಚಿಯವರ ಹುಟ್ಟುಹಬ್ಬದ ನಿಮಿತ್ತ ವಿಶ್ವಕಲಾ ದಿನಾಚರಣೆ, ಸಮೂಹ ಚಿತ್ರಕಲಾ ಪ್ರದರ್ಶನ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ನೂತನ ಸದಸ್ಯರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಜೆಎಸ್‌ಎಸ್ ಸಂಸ್ಥೆಯ ಧಾರವಾಡ ವಿಭಾಗದ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಜಿ. ಬಿರಾದಾರರವರು ಕಾರ್ಯಕ್ರಮ ಉದ್ಘಾಟಿಸಿ ಬಹುಮುಖ ಪ್ರತಿಭಾವಂತ ಕಲಾವಿದರಾದ ಡ ವಿಂಚಿಯವರ ಜೀವನದ ಹಲವು ಪ್ರಮುಖ ಘಟನೆಗಳನ್ನು ಕುರಿತು ಮಾತನಾಡಿದರು.

ಜೆಎಸ್‌ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಬಿ.ಎಂ. ಪಾಟೀಲ್ ಲಿಯೋನಾರ್ಡೊ ಡ ವಿಂಚಿಯವರು ಚಿತ್ರ, ಶಿಲ್ಪ, ವಾಸ್ತುಶಿಲ್ಪ ಕಲಾವಿದರಾಗಿದ್ದರು. ಅಷ್ಟೇ ಅಲ್ಲ ವಿಜ್ಞಾನಿ, ಮಿಲ್ಟ್ರೀ ಇಂಜಿನಿಯರ್, ತಂತ್ರಜ್ಞರಾಗಿದ್ದರು. ಯುದ್ಧ ನೀತಿಯನ್ನು ರೂಪಿಸಬಲ್ಲವರಾಗಿದ್ದರು. ಇವರ ಕಲಾಕೃತಿಗಳ ವಿಶೇಷತೆ ಅಂದರೆ ಮಾನವನ ದೇಹವನ್ನು ಅಧ್ಯಯನ ಮಾಡಲು ಸತ್ತ ಮನುಷ್ಯರ ದೇಹಗಳನ್ನು ಸೀಳಿ ಮೂಳೆಗಳು ಮತ್ತು ಸ್ನಾಯುಗಳ ಅಧ್ಯಯನ ಮಾಡಿ ಚಿತ್ರಶಿಲ್ಪಗಳನ್ನು ರಚಿಸಿದ್ದು, ಅವರ ಕಲಾಕೃತಿಗಳಲ್ಲಿ 'ಮೋನಾಲಿಸಾ' ಮತ್ತು 'ಕೊನೆಯ ಭೋಜನ' ಚಿತ್ರಗಳು ಜಗತ್ಪ್ರಸಿದ್ಧ ಕಲಾಕೃತಿಗಳಾಗಿದ್ದವು. ನಾನಾ ಕ್ಷೇತ್ರದಲ್ಲಿನ ಅವರ ಪರಿಣಿತಿಯನ್ನು ಸ್ಮರಿಸಿಕೊಂಡ ಕಲಾತಜ್ಞರು, ಈ ಪ್ರತಿಭಾವಂತ ಕಲಾವಿದನ ಜನ್ಮದಿನವಾದ ಏಪ್ರಿಲ್ 15 ರಂದು "ವಿಶ್ವಕಲಾ ದಿನಾಚರಣೆ"ಯನ್ನಾಗಿ ಆಚರಿಸಲು ನಿರ್ಧರಿಸಿದರು. ಅಂತೆಯೇ ಜಗತ್ತಿನೆಲ್ಲೆಡೆ ಈ ದಿನವನ್ನು ಕಲಾವಿದರ ದಿನವನ್ನಾಗಿ ಆಚರಿಸಲಾಗುತ್ತದೆ ಎಂದರು.

ಪ್ರೋಬಸ್ ಕ್ಲಬ್‌ನ ನಿವೃತ್ತ ಅಧ್ಯಕ್ಷರಾದ ಶ್ರೀ ಎಸ್.ಬಿ. ಕುರವತ್ತಿಯವರು ಲಿಯೋನಾರ್ಡೊ ಡ ವಿಂಚಿಯವರ ಜೀವನ ಚರಿತ್ರೆ ನಮಗೆ ಬಹಳಷ್ಟು ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಸಹಾಯವಾಯಿತು. ಇಂತಹ ಕಾರ್ಯಕ್ರಮಗಳ ಮೂಲಕ ಕಲಾವಿದರು ಜನಸಾಮಾನ್ಯರ ಹತ್ತಿರ ಬರುತ್ತಾರೆ. ಇದೊಂದು ಉತ್ತಮ ಅವಕಾಶವೆಂದರು.

ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಸ್.ಸಿ. ಪಾಟೀಲರವರು ಜಗತ್ಪ್ರಸಿದ್ಧ ಮೊನಾಲಿಸಾ ಕೃತಿ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದೆ. ಆದರೆ ಅದರ ರಚನಾಕಾರನ ಬಗ್ಗೆ ಬಹಳ ಜನರಿಗೆ ತಿಳುವಳಿಕೆಯಿಲ್ಲ. ಅದನ್ನು ರಚಿಸಿದವರು ಜಗತ್ಪ್ರಸಿದ್ಧ ಚಿತ್ರಕಾರ ಇಟಲಿಯ ಲಿಯೋನಾರ್ಡೊ ಡ ವಿಂಚಿಯಾಗಿದ್ದು, ಈತನು ಹಲವು ಆಯಾಮಗಳಲ್ಲಿ ಕಾರ್ಯನಿರ್ವಹಿಸಿ ವಿಶ್ವಕ್ಕೆ ಪರಿಚಿತರಾಗಿದ್ದಾರೆ. ಈ ಮಹಾನ್ ವ್ಯಕ್ತಿಯನ್ನು ನೆನಪಿಸಿಕೊಳ್ಳಲು ವಿಶ್ವದಾದ್ಯಂತ ಈ ಕಲಾವಿದನ ಹೆಸರಿನಿಂದ "ವಿಶ್ವಕಲಾ ದಿನಾಚರಣೆ"ಯನ್ನು ಆಚರಿಸಲಾಗುತ್ತಿದೆ. ಇದು ಎಲ್ಲ ಕಲಾವಿದರಿಗೂ ಸಲ್ಲುವ ಗೌರವದ ದ್ಯೋತಕವಾಗಿದೆ ಎಂದರೆ ತಪ್ಪಾಗಲಾರದು. ಅಂತಹ ಉನ್ನತ ಮಟ್ಟಕ್ಕೆ ಕಲಾವಿದರು ಬೆಳೆಯಬೇಕು ಎನ್ನುವ ಸಂದೇಶವು ಈ ಆಚರಣೆಯ ಹಿಂದಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ನೂತನ ಸದಸ್ಯರಾಗಿ ಆಯ್ಕೆಯಾಗಿರುವ ಡಾ. ಬಸವರಾಜ ಕಲೆಗಾರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು ಕಲಾವಿದರಾದ ಶ್ರೀ ಬಿ.ಎಸ್.ಬಿ. ಗೌಡರ್, ಶ್ರೀ ಮಹಾಂತೇಶ ಹಿರೇಮಠ, ಶ್ರೀ ಕೆ.ಎಚ್. ವೆಂಕಟೇಶ ಕುಮಾರ್, ಶ್ರೀ ಅಂಬಿಗೇರ, ಶ್ರೀ ಸಿ.ಕೆ. ಹೇರಕಲ್, ಶ್ರೀ ಶರಣಕುಮಾರ ಹಡೆ, ಶ್ರೀ ಮೂರ್ತಿ ಕೆಂಪಣ್ಣ ಮುಂತಾದವರು ಪಾಲ್ಗೊಂಡಿದ್ದರು. ಉಪನ್ಯಾಸಕರಾದ ಶ್ರೀ ಆರ್.ಎಸ್. ಯುವರಾಜ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ಉಚಿತ ಆರೋಗ್ಯ ತಪಾಸಣೆ

## ಬಲ್ಲೇನಹಳ್ಳಿ, ಶ್ರೀರಂಗಪಟ್ಟಣ ತಾಲೂಕು




**ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ** ಎನ್‌ಎಸ್‌ಎಸ್ ಹಾಗೂ **ಜೆಎಸ್‌ಎಸ್ ಸ್ಕೂಲ್ ಆಫ್ ಲೈಫ್ ಸೈನ್ಸ್** ಇವರ ಸಹಭಾಗಿತ್ವದೊಂದಿಗೆ ದಿನಾಂಕ 25.3.2024ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಬಲ್ಲೇನಹಳ್ಳಿಯಲ್ಲಿ ಆಯೋಜಿಸಲಾಯಿತು.

ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಡಾ. ವಿಶಾಲ್ ಎಸ್. ಕುಮಾರ್, ಡಾ. ಪೂರ್ಣಿಮ ಜಾಲವಾದಿ, ಡಾ. ಶಶಿಬಿಂದು ಹಾಗೂ ಕಲಿಕಾ ವೈದ್ಯರನ್ನು ನಿಯೋಜಿಸಲಾಗಿತ್ತು. 60 ಜನರು ಉಚಿತ ತಪಾಸಣೆಯ ಸೌಲಭ್ಯವನ್ನು ಪಡೆದರು.

## ವಿಜಯನಗರ, ಮೈಸೂರು

ವಿಶ್ವ ಕಿಡ್ನಿ ದಿನದ ಅಂಗವಾಗಿ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ** ಶಲ್ಯತಂತ್ರ ವಿಭಾಗದ ವತಿಯಿಂದ ದಿನಾಂಕ 30.3.2024 ರಂದು ಉಚಿತ ತಪಾಸಣಾ ಶಿಬಿರವನ್ನು ಮೈಸೂರಿನ ವಿಜಯನಗರ 2ನೇ ಹಂತದ ಶ್ರೀ ವೀರಾಂಜನೇಯ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ಪೈಲ್ಸ್, ಫಿಸ್ಟುಲಾ, ಫಿಷರ್, ಹರ್ನಿಯಾ ಮತ್ತು ಇತರೇ ಶಸ್ತ್ರ ಚಿಕಿತ್ಸಾ ವ್ಯಾಧಿಗಳಿಗೆ ತಪಾಸಣಾ ಹಾಗೂ ಸಲಹೆಯನ್ನು ನೀಡಲಾಯಿತು.

ಡಾ. ಪೂರ್ಣಿಮ ಜಾಲವಾದಿ, ಡಾ. ಪಿ.ಕೆ.ಎಂ. ಪೂರ್ಣಿಮ, ಸ್ನಾತಕೋತರ ವಿದ್ಯಾರ್ಥಿಗಳು, ಕಲಿಕಾ ವೈದ್ಯರುಗಳು, ಶುಶ್ರೂಷಕರು ಭಾಗವಹಿಸಿದ್ದರು. 105 ರೋಗಿಗಳು ಶಿಬಿರದ ಪ್ರಯೋಜನ ಪಡೆದರು.

## ಹನುಮಂತನಗರ, ಶ್ರೀರಂಗಪಟ್ಟಣ ತಾಲ್ಲೂಕು



**ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ** ಎನ್‌ಎಸ್‌ಎಸ್ ಹಾಗೂ **ಜೆಎಸ್‌ಎಸ್ ಎಎಚ್‌ಇಆರ್ ಘಟಕದ** ಸಹಭಾಗಿತ್ವದೊಂದಿಗೆ ಶಲ್ಯತಂತ್ರ ವಿಭಾಗದ ವತಿಯಿಂದ ದಿನಾಂಕ 27.3.2024ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಶ್ರೀರಂಗಪಟ್ಟಣ ತಾಲ್ಲೂಕು ಹನುಮಂತನಗರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಡಾ. ಆದಿತ್ಯ ಹಾಗೂ ಡಾ. ವೈಶಾಕ್‌ರವರು ಸಾಮಾನ್ಯವ್ಯಾಧಿಗಳಿಂದ ಬಳಲುತ್ತಿದ್ದವರಿಗೆ ಉಚಿತ ಸಲಹಾ ಹಾಗೂ ಚಿಕಿತ್ಸೆಯ ಮಾಹಿತಿಯನ್ನು ನೀಡಿದರು. 92 ಮಂದಿ ಶಿಬಿರದ ಪ್ರಯೋಜನ ಪಡೆದರು.

## ಜೆಎಸ್‌ಎಸ್ ಬಿ.ಇಡಿ. ಕಾಲೇಜು, ಸುತ್ತೂರು




ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಮಹಿಳೆಯರ ಆರೋಗ್ಯದ ಮಹತ್ವವನ್ನು ಪ್ರಶಿಕ್ಷಣಾರ್ಥಿಗಳಿಗೆ ತಿಳಿಸುವ ಸಲುವಾಗಿ ಮೈಸೂರಿನ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ** ವಿಭಾಗದ ವತಿಯಿಂದ ಸಂವಾದ ಮತ್ತು ಉಚಿತ ವೈದ್ಯಕೀಯ ತಪಾಸಣಾ ಶಿಬಿರವನ್ನು ದಿನಾಂಕ 27.3.2024ರಂದು ಸುತ್ತೂರಿನ ಜೆಎಸ್‌ಎಸ್ ಬಿ.ಇಡಿ. ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಪ್ರಾಧ್ಯಾಪಕರುಗಳಾದ ಡಾ. ಡಿ.ಟಿ. ಉಷಾ, ಡಾ. ಕೆ.ಆರ್. ತೇಜಸ್ವಿನಿ ಡಾ. ಕೆ.ಓ. ನಂದಾ, ಡಾ. ಕೆ.

ಲಕ್ಷ್ಮೀಯವರುಗಳು ಋತುಚಕ್ರದ ಬಗ್ಗೆ, ಮುಟ್ಟಿನ ಸಮಯದಲ್ಲಾಗುವ ತೊಂದರೆಗಳ ಬಗ್ಗೆ, ಸ್ತ್ರೀಯರ ಆರೋಗ್ಯದ ಬಗ್ಗೆ ಹಾಗೂ ವೈಯಕ್ತಿಕ ನೈರ್ಮಲ್ಯದ ಬಗ್ಗೆ ತಿಳಿಸಿಕೊಟ್ಟರು. ಸ್ತ್ರೀಯರು ಆರೋಗ್ಯವಾಗಿದ್ದರೆ ಉತ್ತಮ ಸಮಾಜ ರೂಪಿಸಲು ಸಾಧ್ಯ ಎಂದು ತಿಳಿಸಿದರು. ನಂತರ ವೈಯಕ್ತಿಕ ಸಂವಹನ ಮಾಡುವ ಮೂಲಕ ಪ್ರಶಿಕ್ಷಣಾರ್ಥಿಗಳ ಸಮಸ್ಯೆಗಳನ್ನು ಆಲಿಸಿ ಸಲಹೆ ಮತ್ತು ಔಷಧಿ ನೀಡಿದರು.

## ವಿಶ್ವ ಧ್ವನಿ ದಿನ



**ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ** ದಿನಾಂಕ 5.4.2024ರಂದು 'ವಿಶ್ವ ಧ್ವನಿ ದಿನ'ದ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಕಾಲೇಜಿನ ವತಿಯಿಂದ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಗೆ 'ಧ್ವನಿ ಪರೀಕ್ಷೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಹಾಯಕ ಪ್ರಾಧ್ಯಾಪಕರಾದ ಡಾ. ಹೆಚ್.ಎಸ್. ಹರ್ಷನ್‌ಕುಮಾರ್‌ರವರು ಮಾತನಾಡಿ ಶಿಕ್ಷಕರುಗಳಿಗೆ ಧ್ವನಿ ಸಂರಕ್ಷಣೆ ಅತ್ಯಗತ್ಯ, ಶಿಕ್ಷಕ ವೃತ್ತಿ ನಿರ್ವಹಣೆಯಲ್ಲಿ ಧ್ವನಿ ಪಾತ್ರ ಅತ್ಯಂತ ಮಹತ್ವದ್ದಾಗಿದೆ, ಶಿಕ್ಷಕರು ಧ್ವನಿಯನ್ನು ಉತ್ತಮವಾಗಿ ಬಳಸುವುದರ ಜೊತೆಗೆ ಸಂರಕ್ಷಣೆಯನ್ನು ಸಹ ಮಾಡಿಕೊಳ್ಳುವುದು ಅತ್ಯಗತ್ಯ ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕರಾದ ಜಿ.ಎನ್. ಮಂಜುನಾಥರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಬಿ.ಇಡಿ. ವಿದ್ಯಾರ್ಥಿಗಳ ಧ್ವನಿಯನ್ನು ಪರೀಕ್ಷಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಡಿ.ಎಸ್. ವೀಣಾರವರು ವಹಿಸಿದ್ದರು. ಕಾಲೇಜಿನ ಎಲ್ಲಾ ಬೋಧಕ ವರ್ಗದವರು ಉಪಸ್ಥಿತರಿದ್ದರು. ಕು. ಅನುಷಾ ಮತ್ತು ತಂಡ ಪ್ರಾರ್ಥಿಸಿದರು. ಕು. ತಸ್ನಿಮಾರವರು ಸ್ವಾಗತಿಸಿದರು. ಕು. ಸರ್ವಮಂಗಳ ಕಾರ್ಯಕ್ರಮ ನಿರೂಪಿಸಿದರು.

**ಮಾಸಿಕ ಸಾಮೂಹಿಕ ವಿವಾಹ – 2024**
**ಸುತ್ತೂರು ಶ್ರೀಕ್ಷೇತ್ರ**
**ಜೂನ್ 28, ಶುಕ್ರವಾರ**
**ವಿವರಗಳಿಗೆ ಸಂಪರ್ಕಿಸಿ**
**ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**
**ದೂರವಾಣಿ : 08221–232223, 232224**

## ವಿದ್ಯಾರ್ಥಿಯ ಯಶಸ್ಸಿಗೆ ಶಿಸ್ತು ಸಂಯಮ ಮುಖ್ಯ



ಹಿರಿಯ ವಿದ್ಯಾರ್ಥಿಗಳ ಸಮಾವೇಶ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ಹಿರಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಿದ ಸಂದರ್ಭ. ಶ್ರೀ ಕೆ.ಎಸ್. ಮಹೇಶ್, ಶ್ರೀಮತಿ ಸಿ. ರೂಪಶ್ರೀ, ಶ್ರೀ ಸಿ.ಎಂ. ನರಸಿಂಹಮೂರ್ತಿ, ಡಾ. ಜಿ. ನಟರಾಜು, ಶ್ರೀ ಸಿ. ಮಂಜುನಾಥ ಪ್ರಸನ್ನ, ಶ್ರೀ ಆರ್.ಎಂ. ಸ್ವಾಮಿ, ಡಾ. ಎನ್. ಮಹದೇವಸ್ವಾಮಿ, ಡಾ. ಡಿ. ಶೀಲಾಕುಮಾರಿ, ಶ್ರೀಮತಿ ನಿರ್ಮಲ, ಶ್ರೀಮತಿ ಬಿ. ರೇವಣಾಂಬ ಶ್ರೀಮತಿ ಕೆ.ಎಸ್. ಅರುಣಶ್ರೀ ಹಾಗೂ ಸನ್ಮಾನಿತ ಹಿರಿಯ ವಿದ್ಯಾರ್ಥಿಗಳಿದ್ದಾರೆ.

ವಿದ್ಯಾರ್ಥಿಗಳು ಜೀವನದಲ್ಲಿ ನಿರ್ದಿಷ್ಟ ಗುರಿ ತಲುಪಲು ಮತ್ತು ಅದರಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಶಿಸ್ತು ಸಂಯಮ ಮುಖ್ಯ ಎಂದು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ರೋಗ ಲಕ್ಷಣ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಜಿ. ನಟರಾಜುರವರು ಹೇಳಿದರು.

